3. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ

ಅಧ್ಯಕ್ಷರು :- ಮಾನ್ಯ ಕುಮಾರಸ್ವಾಮಿಯವರೆ, ತಾವು ಈಗ ಮಾತನಾಡಿ. ಮಾನ್ಯ ಕುಮಾರಸ್ವಾಮಿಯವರು ಮಾತನಾಡಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಏಕೆಂದರೆ, ಇವತ್ತು ಮಧ್ಯಾಹ್ನ 1.30 ಗಂಟೆಗೆ ಮುಕ್ತಾಯ ಮಾಡಬೇಕೆಂದು ನಾವು ಈಗಾಗಲೇ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಮತ್ತೆ ಬಹಳಷ್ಟು ಜನ ಶಾಸಕರು 2 ಗಂಟೆಗೆ ಬೆಂಗಳೂರಿಗೆ ಹೋಗುತ್ತಿದ್ದಾರೆ. ಆದ್ದರಿಂದ, ಮಧ್ಯಾಹ್ನ 1.30 ಗಂಟೆಗೆ ಮುಕ್ತಾಯ ಮಾಡಬೇಕೆಂದು ಇದ್ದೇವೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ಮಾನ್ಯ ಅಧ್ಯಕ್ಷರೆ, ನಮಗೂ ಕೂಡ ಅವಕಾಶ ಕೊಡಿ.

ಅಧ್ಯಕ್ಷರು :- ಮತ್ತೆ ಮಧ್ಯದಲ್ಲಿ ಬೇರೆ ಬೇರೆ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ಚರ್ಚೆ ಮಾಡುವುದಿಲ್ಲ. ಮಾನ್ಯ ಸಚಿವರಿಂದ ಒಂದು ಹೇಳಿಕೆ ಕೊಡಿಸಿ.

ಅಧ್ಯಕ್ಷರು :- ಮಾನ್ಯ ಕುಮಾರಸ್ವಾಮಿಯವರೆ, ತಾವು ಮಾತನಾಡಿ. ಇವರು ಮಾತನಾಡಿ ಮುಗಿಸಿದ ಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ) :- ಸನ್ಮಾನ್ಯ ಅಧ್ಯಕ್ಷರೆ, ಬೆಳಗಾವಿಯ ಈ ಒಂದು ಅಧಿವೇಶನದಲ್ಲಿ ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆಯನ್ನು ಸದನದ ಕಲಾಪದಲ್ಲಿ ನಡೆಸುತ್ತಿದ್ದೇವೆ. ಈ ಒಂದು ಚರ್ಚೆಯಲ್ಲಿ ಹಲವಾರು ಉತ್ತರ ಕರ್ನಾಟಕ ಭಾಗದ ಸದಸ್ಯರುಗಳು ಹಾಗೂ ಈ ದಿನ ವಿಶೇಷವಾಗಿ ವಿರೋಧಪಕ್ಷದ ನಾಯಕರು ಹಲವಾರು ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಅಂಕಿ-ಅಂಶಗಳ ಸಮೇತ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಈ ಒಂದು ಅಧಿವೇಶನ ಕರೆಯತಕ್ಕಂಥ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ನೇರವಾಗಿ ಒಂದು ವಿಷಯವನ್ನು ಹೇಳಿದ್ದಾರೆ. ಅದೇನೆಂದರೆ, ಈ ಸದನವನ್ನು ನಾನು ಕರೆದಿರತಕ್ಕಂಥ ಉದ್ದೇಶ ಏನೆಂದರೆ, ಮುಂದೆ ಬರತಕ್ಕಂಥ ಲೋಕಸಭಾ ಚುನಾವಣೆಯಲ್ಲಿ ನಮ್ಮ ಪಕ್ಷವನ್ನು ವೃದ್ಧಿ ಮಾಡಿಕೊಳ್ಳಲು ಮತ್ತು ಪಕ್ಷದ ಶಕ್ತಿಯನ್ನು

ಹೆಚ್ಚಿಸಿಕೊಳ್ಳುವುದಕ್ಕೋಸ್ಕರ ಮತ್ತು ರಾಜಕೀಯ ಉದ್ದೇಶದಿಂದ ಸದನವನ್ನು ಕರೆದಿದ್ದೇನೆಂದು ಸದನದ ಹೊರಗಡೆ ಪತ್ರಿಕೆಗಳಲ್ಲಿ ಹೇಳಿರತಕ್ಕಂಥದ್ದನ್ನು ನಾನು ಮಾಧ್ಯಮದಲ್ಲಿ ಗಮನಿಸಿದ್ದೇನೆ. ಇವತ್ತು ರಾಜ್ಯಪಾಲರ ಮುಖಾಂತರ ಈ ಸರ್ಕಾರದ ಹಲವಾರು ವಿಷಯಗಳನ್ನು ಸದನ ಮುಂದೆ ಇಟ್ಟಿದ್ದಾರೆ. ಕಳೆದ ಎಂಟು ಉಪ ಚುನಾವಣೆಗಳಲ್ಲಿ ರಾಜ್ಯದ ಜನತೆ ಈ ಒಂದು ಸರ್ಕಾರದ ಅಭಿವೃದ್ಧಿಗೆ ಆಶೀರ್ವಾದವನ್ನು ಮಾಡುವುದರ ಮುಖಾಂತರ ಈ ಸರ್ಕಾರದ ಪ್ರಗತಿಪರ ನೀತಿಗಳಿಗೆ ಬೆಂಬಲವನ್ನು ನೀಡಿದ್ದಾರೆಂಬ ವಿಶ್ವಾಸವನ್ನು ಮೊದಲನೆ ಪುಟದಲ್ಲಿ ರಾಜ್ಯಪಾಲರ ಭಾಷಣದ ಮುಖಾಂತರ ಹೇಳಿಸಿದ್ದಾರೆ. ನಾನು ಸದನಕ್ಕೆ ಬಂದಾಗ ಮಾನ್ಯ ವಿರೋಧಪಕ್ಷದ ನಾಯಕರು ಈ ಸರ್ಕಾರದ 100 ದಿನಗಳ ಎರಡು ಪುಸ್ತಕಗಳನ್ನು ಸದನದ ಮುಂದೆ ತೋರಿಸಿ ಆ ಒಂದು ಶೀರ್ಷಿಕೆಯಲ್ಲಿರತಕ್ಕಂಥ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದರು. ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. 100 ದಿನಗಳ ಮೊದಲನೇ ಶೀರ್ಷಿಕೆಯಲ್ಲಿ "ಭವ್ಯ ಭವಿಷ್ಯಕ್ಕೆ ಭದ್ರ ಬುನಾದಿ" ಎಂದು ಮತ್ತು 200 ದಿನಗಳ ಪ್ರಗತಿ ಪರಿಶೀಲನೆ ಆದ ನಂತರ "ಭದ್ರ ಬುನಾದಿಯ ಮೇಲೆ ಅಭಿವೃದ್ಧಿ ಸೌಧ" ಎಂದು ಹೇಳಿದ್ದಾರೆ. ಸನ್ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡತಕ್ಕಂಥ ಸಂದರ್ಭದಲ್ಲಿ ಹಲವಾರು ವಿಷಯಗಳನ್ನು ಸದನದ ಮುಂದಿಟ್ಟಿದ್ದಾರೆ. ನಾನು ರಾಜ್ಯಪಾಲರ ಭಾಷಣವನ್ನು ನೋಡಿದಾಗ ಎಲ್ಲೋ ಒಂದು ಕಡೆ ನಿಜಕ್ಕೂ ಭದ್ರ ಬುನಾದಿಯ ಮೇಲೆ ಅಭಿವೃದ್ಧಿ ಸೌಧ ಕರ್ನಾಟಕ ರಾಜ್ಯದ ಅಭಿವೃದ್ಧಿಯ ಮೇಲೆ ಕಟ್ಟಿದ್ದಾರೆಂಬ ಭಾವನೆಯಲ್ಲಿ ನಾನು ಇದ್ದೆ. ಆದರೆ, ವಿರೋಧಪಕ್ಷ ನಾಯಕರು ನೀಡಿದ ಕೆಲವು ಅಂಕಿ-ಅಂಶಗಳನ್ನು ನೋಡಿದಾಗ ಈ ಒಂದು ಭವ್ಯ ಭವಿಷ್ಯಕ್ಕೆ ಭದ್ರ ಬುನಾದಿ ಮತ್ತು ಭದ್ರ ಬುನಾದಿಯ ಮೇಲೆ ಅಭಿವೃದ್ಧಿ ಸೌಧ ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಆ ಸೌಧವನ್ನು ಕಟ್ಟಿಲ್ಲ. ಅದು ಬಿಜೆಪಿ ಪಕ್ಷದ ಭದ್ರ ಬುನಾದಿಯನ್ನು ಹಾಕಿಕೊಳ್ಳುವುದಕ್ಕೆ ಮತ್ತು ಬಿಜೆಪಿ ಪಕ್ಷದ ಅಭಿವೃದ್ಧಿ ಸೌಧ ಕಟ್ಟುವುದಕ್ಕೆ 200 ದಿನಗಳ ಸಾಧನೆಯ ಶೀರ್ಷಿಕೆಯುನ್ನು ಇಲ್ಲಿಟ್ಟಿದ್ದಾರೆ. ಈ ಒಂದು ಕೆಲಸಕ್ಕೆ ಅವರು ಈ ಸಮಯವನ್ನು ವಿನಿಯೋಗ ಮಾಡಿದ್ದಾರೆಂಬುದನ್ನು ನಾವು ಗಮನಿಸಬಹುದು ಎನ್ನತಕ್ಕಂಥದ್ದು ನನ್ನ ಅಭಿಪ್ರಾಯವಾಗಿದೆ. ಏತಕ್ಕಾಗಿ ಈ ವಿಷಯವನ್ನು ನಾನು ಹೇಳುತ್ತಿದ್ದೇನೆಂದರೆ, ಈ ಸದನದ ಕಲಾಪಗಳನ್ನು ಬೆಳಗಾವಿಯಲ್ಲಿ ಕರೆದಾಗ ಉತ್ತರ ಕರ್ನಾಟಕ ಜನತೆಯ ಮನಸ್ಸಿನಲ್ಲಿ ಮತ್ತು ಹಲವಾರು ಹಿರಿಯ ನಾಗರಿಕರಲ್ಲಿ ಮತ್ತು ಮಾಧ್ಯಮಗಳಲ್ಲಿ ಈ

ಒಂದು ಸದನದ ಮುಖಾಂತರ ರಾಜ್ಯದ ಅಭಿವೃದ್ಧಿಗೆ ಅದರಲ್ಲಿಯೂ ವಿಶೇಷವಾಗಿ ಉತ್ತರ ಕರ್ನಾಟಕ ವಿಷಯಗಳ ಬಗ್ಗೆ ಹೆಚ್ಚಿನ ಒಂದು ಚರ್ಚೆಗಳು ಆಗಬಹುದೆಂಬ ಭಾವನೆಯನ್ನು ವ್ಯಕ್ತಪಡಿಸಿದ್ದರು.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕಳೆದ 7-8 ದಿವಸದ ವಿಧಾನ ಸಭೆಯ ಕಲಾಪದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಪ್ರತಿಕ್ರಿಯೆಯನ್ನು ಕೊಟ್ಟಿದ್ದಾರೆ. ನನಗೆ ತುಂಬಾ ನೋವಾಗಿದೆ, ಏಕೆಂದರೆ, ವಿರೋಧಪಕ್ಷದವರು ಸರಿಯಾಗಿ ಸಹಕಾರವನ್ನು ಕೊಡದೆ ಇರುವುದರಿಂದ, ಈ ಒಂದು ಸದನವನ್ನು ಕರೆದ ಉದ್ದೇಶ ಸಫಲವಾಗಲಿಲ್ಲ. ಮತ್ತೆ ವಿಧಾನಸಭೆಯ ಕಲಾಪಗಳಿಗೆ ಇವತ್ತು ಏನಾದರೂ ಅಡಚಣೆಯಾಗಿದ್ದರೆ ಅದು ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳ ನಡವಳಿಕೆಯಿಂದ ಆ ರೀತಿಯಾಗಿದೆ ಎಂಬ ಭಾವನೆ ಜನರಲ್ಲಿ ಮೂಡಿದೆ. ಆದ್ದರಿಂದ, ನನಗೆ ಒಂದು ರೀತಿಯಲ್ಲಿ ಸಂತೋಷವಾಗಿದೆ ಎಂದು ಇವತ್ತು ಒಂದು ಮಾಧ್ಯಮದಲ್ಲಿ ಪ್ರತಿಕ್ರಿಯೆ ನೀಡುವಾಗ ವ್ಯಕ್ತಪಡಿಸಿದ್ದಾರೆ. ಇವತ್ತಿನ ದಿವಸ ಅವರಿಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಪ್ರಸ್ತಾವವನ್ನು ಮಂಡನೆಯನ್ನು ಮಾಡಿದಂಥ ಮಾನ್ಯ ತಿಪ್ಪೇಸ್ವಾಮಿಯವರು ಮತ್ತು ಅನುಮೋದನೆಯನ್ನು ಮಾಡಿದಂಥ ಸಿದ್ದುಸವದಿಯವರು ಭಾಷಣವನ್ನು ಮಾಡಿದಂಥ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಹೇಳಿದರು.

ಈ ರಾಜ್ಯದಲ್ಲಿ ಮುಂದಿನ 20 ವರ್ಷಗಳ ಕಾಲ ಯಾವ ಪಕ್ಷಗಳೂ ಇಲ್ಲಿ ಅಧಿಕಾರಕ್ಕೆ ಬರುವುದಕ್ಕೆ ಸಾಧ್ಯವಿಲ್ಲ. ನಾವೇ ಈ ಒಂದು ಜಾಗದಲ್ಲಿ ಭದ್ರವಾಗಿ ಕೂರುತ್ತೇವೆ ಎನ್ನುವಂಥದ್ದರ ಬಗ್ಗೆ ಅವರು ವಂದನಾ ನಿರ್ಣಯವನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ವ್ಯಕ್ತಪಡಿಸಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. ಕಳೆದ ಉಪ ಚುನಾವಣೆಯಲ್ಲಿ 8 ಕ್ಷೇತ್ರಗಳಲ್ಲಿ 5 ಕ್ಷೇತ್ರಗಳನ್ನು ಬಿಜೆಪಿಯವರು ಗೆಲ್ಲುವುದರ ಮುಖಾಂತರ ನಾವು ಭದ್ರವಾಗಿದ್ದೇವೆ ಎನ್ನುವಂಥ ಭಾವನೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದಾರೆ. ಇವತ್ತು ಸರ್ಕಾರವನ್ನು ನಡೆಸುವಂತಹ ರೀತಿಯಲ್ಲಿ ಅವರು ಸಂಖ್ಯೆಯಲ್ಲಿ ಸುಭದ್ರರಾಗಿರಬಹುದು. ಅವರು ಸತತವಾಗಿ 20 ವರ್ಷಗಳ ಕಾಲ ನಾವೇ

ಇರುತ್ತೇವೆನ್ನುವಂತಹ ಮಾತನ್ನು ಹೇಳಿದ್ದಾರೆ. ಅವರು ಇರಲಿ ಎಂದು ನಾನು ಈ ಸಂದರ್ಭದಲ್ಲಿ ಅವರಿಗೆ ಶುಭಾಷಯಗಳನ್ನು ಕೋರುತ್ತೇನೆ. ಆದರೆ ಇವತ್ತು ಯಾರಿಗೂ ಅಧಿಕಾರ ಶಾಶ್ವತವಲ್ಲವೆನ್ನುವುದನ್ನು ಅರಿತುಕೊಳ್ಳಬೇಕಾಗುತ್ತದೆ. ಇವತ್ತು ಈ ಭಾಗದಲ್ಲಿ ನಾವುಗಳು ಇದ್ದೇವೆ, ನೀವು ಆ ಭಾಗದಲ್ಲಿದ್ದೀರಿ. ಸಾರ್ವತ್ರಿಕ ಚುನಾವಣೆಯಲ್ಲಿ 110 ಸ್ಥಾನಗಳನ್ನು ಗೆದ್ದ ನಂತರ 6 ಜನ ಪಕ್ಷೇತರ ಸದಸ್ಯರ ಬೆಂಬಲದಿಂದ ಸರ್ಕಾರವನ್ನು ಏನು ರಚನೆ ಮಾಡಿದ್ದೀರಿ, ಅದರ ನಂತರ ಏನು ಈ ರಾಜ್ಯದ ಏಳು ತಿಂಗಳ ಆಡಳಿತದಲ್ಲಿ ನೀವು ಹೆಚ್ಚಿನ ಗಮನವನ್ನು ಕೊಟ್ಟಿರುವುದು 8 ಶಾಸಕರುಗಳ ಕ್ಷೇತ್ರಗಳ ಚುನಾವಣೆಯನ್ನು ನಡೆಸುವುದಕ್ಕೆ ಅದರಲ್ಲೂ ಗ್ರೆಸ್ ಮತ್ತು ಜೆಡಿ(ಎಸ್)ನ 7 ಜನ ಶಾಸಕರ ರಾಜೀನಾಮೆಯನ್ನು ಇವತ್ತು ಕೊಡುವಂತಹ ಏನು ವಾತಾವರಣವನ್ನು ನಿರ್ಮಾಣ ಮಾಡಿದ್ದೀರಿ, ಅದರ ಮುಖಾಂತರ ನಿಮ್ಮ ಒಂದು ಭದ್ರ ಬುನಾದಿಯನ್ನು ಕಟ್ಟಿಕೊಳ್ಳುವುದಕ್ಕೆ ಹೊರಟಿರುತ್ತೀರಿ ಹೊರತು 7 ತಿಂಗಳಲ್ಲಿ ನೀವು ಸಾಧನೆ ಮಾಡಿರುವುದು ಅದು ನಿಮ್ಮ ಸಾಧನೆಯಲ್ಲ. ನೀವು 5 ಕ್ಷೇತ್ರಗಳಲ್ಲಿ ಗೆದ್ದಿರುವುದು, ಆಯಾ ಕ್ಷೇತ್ರಗಳಲ್ಲಿ ಯಾವ ವ್ಯಕ್ತಿಗಳು ನಿಮ್ಮ ಪಕ್ಷದ ಅಭ್ಯರ್ಥಿಗಳಾಗಿ ಚುನಾವಣಾ ಕಣದಲ್ಲಿದ್ದರು, ಅವರುಗಳು ಅವರ ಶಕ್ತಿಯ ಮೇಲೆ ಇವತ್ತು ಚುನಾವಣೆಯಲ್ಲಿ ಗೆದ್ದಿದ್ದಾರೆಯೇ ಹೊರತು ನಿಮ್ಮ ಒಂದು ಅಭಿವೃದ್ಧಿಯ ಹೆಸರಿನಲ್ಲಾಗಲಿ ಇಲ್ಲ. ನಿಮ್ಮ ಒಂದು ಪ್ರಗತಿ ಮೇಲೆ ಮತವನ್ನು ಪಡೆದಿದ್ದೇವೆ ಎಂದು ನೀವು ಸದನದಲ್ಲಿ ಹೇಳಿಕೊಳ್ಳಬಹುದು ಅಷ್ಟೇ. ಆದರೆ ನಾವು ವಾಸ್ತವಾಂಶದ ಬಗ್ಗೆ ಚರ್ಚೆ ಮಾಡುವುದಾದರೆ ನಿಮ್ಮ ಒಂಬು ಭದ್ರ ಬುನಾದಿಯನ್ನು ಹಾಕಿಕೊಳ್ಳುವುದಕ್ಕೆ ಆ 5 ಜನ ಶಾಸಕರು ನಿಮ್ಮ ಪರವಾಗಿ ಗೆದ್ದಿದ್ದಾರೆ, ಅದು ವೈಯಕ್ತಿಕವಾಗಿ ಹಿಂದಿನ ರಾಜಕೀಯದ ಅವರ ಶಕ್ತಿಗಳನ್ನು ಏನು ಉಳಿಸಿಕೊಂಡು ಬಂದಿದ್ದರು, ಅವರ ಒಂದು individual capacity ಯ ಮೇಲೆ ಅವರುಗಳು ಗೆದ್ದಿದ್ದಾರೆ. ಅವರು ಮುಂದೆ ನಿಮ್ಮ ತತ್ವಸಿದ್ಧಾಂತಗಳ ಮೇಲೆ ನಿಮ್ಮ ಜೊತೆಯಲ್ಲಿ ಇರುತ್ತಾರೆಂಬುದು ನೀವು ಏನಾದರೂ ತಿಳಿದುಕೊಂಡಿದ್ದರೆ, ಆ ತತ್ವಸಿದ್ಧಾಂತಕ್ಕಿಂತ ಹೆಚ್ಚಾಗಿ ಅಧಿಕಾರ ಮತ್ತು ನಿಮ್ಮ ಒಂದು ಕೆಲವು ಆಂತರಿಕವಾಗಿ ಚರ್ಚೆಯನ್ನು ಏನು ಮಾಡಿದ್ದೀರಿ, ಅದರ ಆಧಾರದ ಮೇಲೆ ನಿಮ್ಮ ಜೊತೆಯಲ್ಲಿ ಇದ್ದಾರೆ. ಇವೆಲ್ಲವೂ ಶಾಶ್ವತವಾಗಿರುವಂತಹ ಒಂದು ಸಂದರ್ಭಗಳು ಅಲ್ಲವೆಂಬುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. 7 ತಿಂಗಳ ಅಭಿವೃದ್ಧಿಯ ಹೆಸರಿನಲ್ಲಿ ನೀವು ಆ ಉಪಚುನಾವಣೆಯಲ್ಲಿ ಗೆದ್ದಿರುವುದಲ್ಲ. ಆ ಚುನಾವಣೆಯನ್ನು ನಡೆಸುವಂತಹ ಪ್ರಕ್ರಿಯೆಯಲ್ಲಿ ಯಾವ

ರೀತಿಯಾಗಿ ನೀವು ನಡೆದುಕೊಂಡಿದ್ದೀರೆಂಬುದನ್ನು ಈಗಾಗಲೇ ಮಾಧ್ಯಮಗಳೇ ಚುನಾವಣೆಯ ಸಂದರ್ಭದಲ್ಲಿ ಚುನಾವಣೆಯ ಪ್ರಕಿಯೆಗಳು ಯಾವ ರೀತಿಯಾಗಿ ನಡೆದಿವೆ ಎಂಬುದನ್ನು ಬಿತ್ತರಿಸಿದ್ದಾವೆ. ಆದ್ದರಿಂದ ಅಭಿವೃದ್ಧಿಗಿಂತ ಹೆಚ್ಚಾಗಿ ಚುನಾವಣೆಯನ್ನು ಕುತಂತ್ರದ ಮೂಲಕ ಗೆಲ್ಲತಕ್ಕಂತಹ ಒಂದು ಕೆಲಸವನ್ನು ನೀವು ಮಾಡಿಕೊಂಡಿದ್ದೀರಿ. ನೀವು ಅಧಿಕಾರದಲ್ಲಿ 20 ವರ್ಷಗಳ ಕಾಲ ಇರುತ್ತೇವೆಂಬ ಭಾವನೆಯುನ್ನು ಏನು ವ್ಯಕ್ತಪಡಿಸಿದ್ದೀರಿ, ಅದನ್ನು ಮುಂದಿನ ದಿನಗಳಲ್ಲಿ ಕಾದುನೋಡೋಣವೆಂಬದುನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಬೆಳಗಾವಿಯಲ್ಲಿ ಅಧಿವೇಶನವನ್ನು ಪ್ರಾರಂಭ ಮಾಡಿದ ನಂತರ ಎಲ್ಲರ ಬಾಯಿಯಲ್ಲಿ ಡಾ॥ ನಂಜುಂಡಪ್ಪನವರ ವರದಿಯ ಬಗ್ಗೆ ಚರ್ಚೆ ಮಾಡಿರುವುದನ್ನು ನಾವು ಗಮನಿಸುತ್ತಿದ್ದೇವೆ. ಈ ವರದಿಯನ್ನು ತರತಕ್ಕಂತಹ ಒಂದು ಸಂದರ್ಭ, ಇದು ಯಾವ ಸಂದರ್ಭದಲ್ಲಿ ಬಂತು? ಏಕೆಂದರೆ, ನಮ್ಮ ಬಿಜೆಪಿಯ ಸ್ನೇಹಿತರುಗಳು ಏನು ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸಂಪೂರ್ಣವಾಗಿ ನಾವೇ ಮಾಲೀಕರುಗಳು ಇನ್ನು ಯಾವ ಪಕ್ಷಗಳ ಕೈಯಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿ ಸಾಧ್ಯವಿಲ್ಲ. ಇವತ್ತು ಉತ್ತರ ಕರ್ನಾಟಕದ ಅಭಿವೃದ್ಧಿಯನ್ನು ಮಾಡುವುದಕ್ಕಾಗಿಯೇ ಈ ಪಕ್ಷ ಇಲ್ಲಿ ಇದೆ. ಈ ರೀತಿಯಾದ ಮಾತುಗಳನ್ನು ನೀವು ವ್ಯಕ್ತಪಡಿಸಿದ್ದೀರಿ. ಇವತ್ತು ಡಾ॥ ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಕ್ಕೆ ತರುವಂತಹ ವಿಷಯದಲ್ಲಿ ಏನು ಆ ವರದಿಯುನ್ನು ಕೊಡುವಂತಹದ್ದಕ್ಕೆ ಕಾಂಗ್ರೆಸ್ ಸರ್ಕಾರ ಹಿಂದೆ ಆಡಳಿತದಲ್ಲಿದ್ದಾಗ ಕನಿಷ್ಠ ಈ ಉತ್ತರ ಕರ್ನಾಟಕದ ಭಾಗಗಳು ಇರಬಹುದು, ಅದರ ಜೊತೆಗೆ ಈ ರಾಜ್ಯದಲ್ಲಿರುವಂತಹ ಅತ್ಯಂತ ಹಿಂದುಳಿದಿರುವಂತಹ ತಾಲ್ಲೂಕುಗಳ ಒಂದು ಮಾಹಿತಿಯುನ್ನು ಸಂಗ್ರಹ ಮಾಡಿ, ಈ ರಾಜ್ಯದಲ್ಲಿ ಸರ್ಕಾರವನ್ನು ನಡೆಸಿರುವಂತಹವರಿಗೆ ಒಂದು ಬೈಬಲ್ ರೂಪದಲ್ಲಿ ಹಿಂದುಳಿರುವಂತಹ ತಾಲ್ಲೂಕುಗಳಿಗೆ ಯಾವ ಆದ್ಯತೆಯ ಮೇರೆಗೆ ಕೆಲಸವನ್ನು ಮಾಡಬೇಕೆನ್ನುವಂತಹ ವರದಿಯನ್ನಾದರೂ ಕೊಡುವಂತಹ ಒಂದು ನಿರ್ಧಾರ ಮಾಡುವುದಕ್ಕೆ ಹಿಂದೆ ಇದ್ದಂತಹ ಕಾಂಗ್ರೆಸ್ ಸರ್ಕಾರ ಕಾರಣ ಎಂಬುದನ್ನು ನಾವು ಈ ಸಂದರ್ಭದಲ್ಲಿ ಮರೆಯಬಾರದು ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅದರ ಜೊತೆಗೆ ಮಾನ್ಯ ಧರ್ಮಸಿಂಗ್‌ರವರು ಸಮ್ಮಿಶ್ರ ಸರ್ಕಾರದ ಆಡಳಿತವನ್ನು 2004ರಲ್ಲಿ ಪ್ರಾರಂಭ ಮಾಡಿದರು. ಆಗ ಈ ಒಂದು ಡಾ॥ ನಂಜುಂಡಪ್ಪನವರ ವರದಿಯ ಅನುಷ್ಠಾನವನ್ನು ಮಾಡುವಂತಹ ವಿಷಯದಲ್ಲಿ ಚರ್ಚೆಗಳ ಹಂತಕ್ಕೆ ಬಂದೆವು.

ಸಮ್ಮಿಶ್ರ ಸರ್ಕಾರವನ್ನು ನಡೆಸುವಂತಹ ಸಂದರ್ಭದಲ್ಲಿ ಮೊದಲನೆಯ ಬಾರಿಗೆ ಬೆಳಗಾವಿಯಲ್ಲಿ ಅಧಿವೇಶನ ನಡೆಸುವಂತಹ ತೀರ್ಮಾನವನ್ನು ಮಾಡಿದೆವು. ಆ ಸಂದರ್ಭದಲ್ಲಿ ವಿಶೇಷವಾಗಿ ಡಾ॥ ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಕ್ಕೆ ತರುವಂತಹ ವಿಷಯದಲ್ಲಿ ಹಲವಾರು ವಿಷಯಗಳನ್ನು ನಾವು ಇಲ್ಲಿ ಚರ್ಚೆ ಮಾಡಿದ್ದೇವೆ. ಆ ಸಂದರ್ಭದಲ್ಲಿ ಆವತ್ತು ಈಗಿನ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳಾಗಿ ಒಂದು ಮಾತನ್ನು ಹೇಳುತ್ತಾರೆ. ಡಾ॥ ನಂಜುಂಡಪ್ಪನವರ ವರದಿಯ ಜಾರಿಯ ವಿಷಯದಲ್ಲಿ ಈವರೆಗೆ ಆಗಿರುವ ಪ್ರಗತಿ ಕೈಗೆತ್ತಿಕೊಂಡಿರುವ ಕಾರ್ಯಕ್ರಮಗಳ ಅಧ್ಯಯನಕ್ಕಾಗಿ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರಾದಂತಹ ಡಾ॥ ಎ.ರವೀಂದ್ರರವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಎರಡು ತಿಂಗಳಲ್ಲಿ ವರದಿಯನ್ನು ಸಲ್ಲಿಸಲಿದ್ದು ಅದನ್ನು ಆಧರಿಸಿ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ವಿಧಾನಸಭೆಯಲ್ಲಿ ಆವತ್ತು ಪ್ರಕರಣೆಯನ್ನು ಮಾಡಿದರು. ಕಳೆದ ವಿಧಾನಸಭೆಯಲ್ಲಿ ಮೊದಲನೆಯ ಬಾರಿಗೆ ಇಲ್ಲಿ ಪ್ರಾರಂಭ ಮಾಡಿದೆವು. ಆ ಸಂದರ್ಭದಲ್ಲಿ 1,500 ಕೋಟಿ ರೂಪಾಯಿಗಳು ವಿಶೇಷ ಅನುದಾನವನ್ನು ಆ ವರ್ಷ ಯಾವ ಒಂದು ನಂಜುಡಂಪ್ಪನವರ ವರದಿಯ ಆಧಾರದ ಮೇಲೆ ಹಿಂದುಳಿದಿರತಕ್ಕಂತಹ ಜಿಲ್ಲೆಗಳು ಮತ್ತು ತಾಲ್ಲೂಕುಗಳೂ ಇದೆ ಆ ಒಂದು ಕ್ಷೇತ್ರಗಳಿಗೆ ಇವತ್ತು ಅಭಿವೃದ್ಧಿಯನ್ನು ಮಾಡುವುದಕ್ಕೆ ಹಣವನ್ನು ಮೀಸಲಿಟ್ಟಿದ್ದೇವೆನ್ನುವಂತಹ ಮಾತನ್ನು ಹಿಂದೆ ನಡೆದಂತಹ ಈ ಒಂದು ವಿಧಾನಸಭೆಯ ಕಲಾಪದಲ್ಲಿ ಹೇಳಿದರು. ಹಾಗೂ ಈ ಬಾರಿಯ ಬಜೆಟ್‌ನಲ್ಲಿ 2,500 ಕೋಟಿ ರೂಪಾಯಿಗಳನ್ನು ವಿಶೇಷ ಅನುದಾನವನ್ನು ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಕೊಡುತ್ತೇವೆ ಎಂದು ವಿಶೇಷವಾದ ನೆರವು ಎಂಬ ಪದವನ್ನು ಬಜೆಟ್‌ನಲ್ಲಿ ಬಳಸಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ 4,000 ಕೋಟಿ ರೂಪಾಯಿಗಳ ಹಣ ನಾನು ಇಟ್ಟಿದ್ದೇನೆ ಎನ್ನುವುದನ್ನು ಆರ್ಥಿಕ ಸಚಿವರಾಗಿ ಅವರೇ ಮಂಡನೆ ಮಾಡಿದ್ದಾರೆ. ಆ 4,000 ಕೋಟಿ ರೂಪಾಯಿಗಳು ವಿನಿಯೋಗವಾಗುವಂತಹ ರೀತಿಯಲ್ಲಿ ಸರ್ಕಾರ ಕ್ರಮಗಳನ್ನು ತೆಗೆದುಕೊಂಡಿದೆಯಾ? ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು 7 ತಿಂಗಳು ಆಗಿದೆ ಎಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬಹುದು. ಆದರೆ ಅವರು 7 ತಿಂಗಳ ಸರ್ಕಾರದ ನೇತೃತ್ವವನ್ನು ವಹಿಸಿರುವುದಿಲ್ಲ. ಈ ರಾಜ್ಯದ ಆರ್ಥಿಕ ಸಚಿವರಾಗಿ ಕಳೆದ 3 ಆಯವ್ಯಯವನ್ನು ಮಂಡನೆ ಮಾಡಿದ್ದಾರೆ. ಆ ಸಂದರ್ಭದಲ್ಲಿ 1,500 ಕೋಟಿ ರೂಪಾಯಿಗಳ ಬಗ್ಗೆ

ಕಳೆದ ಬಜೆಟ್ ಮಂಡನೆ ಮಾಡಿದಾಗ ಹೇಳಿರುವಂತಹದ್ದು. ಈಗ 2,500 ಕೋಟಿ ರೂಪಾಯಿಗಳ ಬಗ್ಗೆ ಹೇಳಿದ್ದಾರೆ. ನಮಗೆ ಇರುವಂತಹ ಮಾಹತಿಯ ಪ್ರಕಾರ, ಇನ್ನೂ ಈ ಒಂದು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಯಾವುದೇ ರೀತಿಯ ನೀಲಿ ನಕ್ಷೆಗಳನ್ನು ತಯಾರು ಮಾಡಿರುವುದಿಲ್ಲ. ಏನು ಎರಡು ತಿಂಗಳಲ್ಲಿ ಯೋಜನಾ ಆಯೋಗದ ಉಪಾಧ್ಯಕ್ಷರ ಮುಖಾಂತರ ಈ ಒಂದು ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವುದಕ್ಕೆ ನಾವು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ, ಇವತ್ತು ರವೀಂದ್ರರವರ ಅಧ್ಯಕ್ಷತೆಯಲ್ಲಿ ನಾವು ಕಾರ್ಯಪಡೆಯನ್ನು ರಚನೆ ಮಾಡಿದ್ದೇವೆ ಎಂದು ಕಳೆದ ವಿಧಾನಸಭೆಯ ಕಲಾಪದಲ್ಲಿ ಇಲ್ಲಿ ಏನು ಹೇಳಿದ್ದರು, ಅದು ಇಲ್ಲಿಯವರೆಗೆ ಅನುಷ್ಠಾನಕ್ಕೆ ಬಂದಿದ್ದೆಯೋ ಇಲ್ಲವೋ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ತರಬೇಕೆಂದು ಮನವಿಯನ್ನು ಮಾಡುವುದಕ್ಕೆ ಬಯಸುತ್ತೇನೆ. ಇವತ್ತು ಡಾ॥ ನಂಜುಂಡಪ್ಪನವರ ವರದಿಯ ಬಗ್ಗೆ ವಿಶೇಷವಾದ ಅನುದಾನವನ್ನು ಕೊಟ್ಟಿದ್ದೇನೆ ಎನ್ನುವಂತಹ ಮಾತನ್ನು ಅವರು ಹೇಳಿದರು. ನನಗೆ ಇರುವಂತಹ ಮಾಹಿತಿಯ ಪ್ರಕಾರ ಇವತ್ತು ರಾಜ್ಯ ಸರ್ಕಾರದ ಹಲವಾರು ಇಲಾಖೆಗಳಲ್ಲಿ ಇರುವ ಹೆಡ್‌ಗಳಲ್ಲಿ ಬರುವಂತಹ ಹಣ ಇದೆ, ಆ ಹಣವನ್ನು ವಿನಿಯೋಗ ಮಾಡಿರುವುದನ್ನು ಬಿಟ್ಟರೆ, ಏನು ವಿಶೇಷವಾದ ಅನುದಾನವನ್ನು ಕೊಡುತ್ತೇವೆನ್ನುವಂತಹ ಮಾತನ್ನು ಹೇಳಿದ್ದರು, ಆ ವಿಶೇಷವಾದ ಅನುದಾನಗಳು ಇಲ್ಲಿಯವರೆಗೂ ಬಿಡುಗಡೆಯಾಗಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಆದ್ದರಿಂದ ಮಾತಿನಲ್ಲಿ ಹೇಳುವಂತಹ ಸಂದರ್ಭಕ್ಕೂ ಕೃತಿಯಲ್ಲಿ ಅನುಷ್ಠಾನಕ್ಕೆ ತರುವಂತಹದ್ದಕ್ಕೂ ಹಲವಾರು ರೀತಿಯ ವ್ಯತ್ಯಾಸಗಳು ಇವೆ ಎಂಬುದನ್ನು ಈ ಒಂದು ಸಂದರ್ಭದಲ್ಲಿ ಗಮನಿಸಬಹುದು ಎಂದು ನನ್ನ ಅಭಿಪ್ರಾಯವಾಗಿದೆ. ಇವತ್ತು ಸನ್ಮಾನ್ಯ ವಿರೋಧಪಕ್ಷದ ನಾಯಕರು ಹಲವಾರು ವಿಷಯಗಳನ್ನು ಹಲವಾರು ಇಲಾಖೆಗಳಿಗೆ ಸಂಬಂಧಪಟ್ಟಹಾಗೆ ಅವರು ಚರ್ಚೆಯನ್ನು ಮಾಡಿದ್ದಾರೆ. ಇವತ್ತು ಸರ್ಕಾರ ಆರ್ಥಿಕ ಚಿತ್ರಣವನ್ನು ಇಡತಕ್ಕಂತಹ ಸಂದರ್ಭದಲ್ಲಿ ಹೇಳಿದ್ದಾರೆ, ಈ ವರ್ಷ ತೆರಿಗೆಯ ಸಂಗ್ರಹಣೆಯಲ್ಲಿ ನಮ್ಮ ಒಂದು ನಿರೀಕ್ಷೆ ಏನಿತ್ತು, ಆ ನಿರೀಕ್ಷೆಯನ್ನು ಮುಟ್ಟುವುದಕ್ಕೆ ಸಾಧ್ಯವಿಲ್ಲವೆನ್ನುವಂತಹ ಮಾತನ್ನು ಹೇಳಿದ್ದಾರೆ. ಸನ್ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಬೇಕಾದರೆ ಕೊನೆಯ ಹಂತದಲ್ಲಿ ಒಂದು ಮಾತನ್ನು ಹೇಳಿದರು. ಈ ವರ್ಷದ ನಿಮ್ಮ ಒಂದು ತೆರಿಗೆಯನ್ನು ಸಂಗ್ರಹ ಮಾಡುವಂತಹದ್ದರಲ್ಲಿ ಕನಿಷ್ಠ 5 ಸಾವಿರದಿಂದ 8 ಸಾವಿರ ಕೋಟಿ ರೂಪಾಯಿಗಳವರೆಗೆ ಕೊರತೆ ಬೀಳಬಹುದು ಎಂಬ ಮಾತನ್ನು ಹೇಳಿದರು.

ಹಾಗಿದ್ದರೆ ನಿಮ್ಮ ಒಂದು ಕಳೆದ ಬಜೆಟ್‌ಗೆ ಯಾವ ರೀತಿಯಾಗಿ ಹೊಂದಿಸಿಕೊಳ್ಳುತ್ತೀರಿ ಎನ್ನುವಂತಹ ಪ್ರಶ್ನೆಯನ್ನು ಅವರು ಇಟ್ಟಿದ್ದಾರೆ. ನಾನು ಎಲ್ಲೋ ಒಂದು ಕಡೆಯಲ್ಲಿ ಅದನ್ನು ಗಮನಿಸಿದ್ದೇನೆ.

ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆಯಲ್ಲಿ ಹೇಳಿದ್ದಾರೆ. ಅದನ್ನು ನಾನು ಮಾಧ್ಯಮಗಳಲ್ಲಿ ಗಮನಿಸಿದ್ದೇನೆ. ಆ ಕೊರತೆಯನ್ನು ಬಹುಶಃ ಅವರು state will raise Rs. 7 crore loan from RBI. Rs. 1,000 crore will be drawn next month. ಏನು ಸರ್ ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಕೇಳಿದ್ದೀರಲ್ಲಾ, ಈಗಾಗಲೇ 7,000 ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳುವ ಬಗ್ಗೆ ನಮ್ಮ ರಾಜ್ಯ ಸರ್ಕಾರಕ್ಕೆ RBIನಿಂದ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಇವತ್ತು ನಾವು ಅದರ ಕಡೆಗೆ ಗಮನವನ್ನು ಕೊಡುತ್ತೇವೆನ್ನುವಂತಹ ಮಾತು ಒಂದು ಹಿಂದೂ ಪತ್ರಿಕೆಯಲ್ಲಿ ದಿನಾಂಕ : 8-12-2008ರಲ್ಲಿ ಬಂದಿರುತ್ತದೆ. ಮುಂದಿನ ತಿಂಗಳಲ್ಲಿ ನಾವು ಸಾವಿರ ಕೋಟಿ ರೂಪಾಯಿಗಳನ್ನು RBIನಿಂದ ತೆಗೆದುಕೊಳ್ಳಬೇಕಾಗುತ್ತದೆ, ಸನ್ಮಾನ್ಯ ಮುಖ್ಯಮಂತ್ರಿಗಳೇ ಎಲ್ಲೋ ಆ ಒಂದು ವಿಷಯವನ್ನು ಪ್ರಸ್ತಾಪ ಮಾಡಿರುವುದರಿಂದ ಅಲ್ಲಿಗೆ ಈ ಸರ್ಕಾರ ಈ ಒಂದು ತೆರಿಗೆ ಸಂಗ್ರಹ ಮಾಡುವುದರಲ್ಲಿ ನಾವು ಎಡವಿದ್ದೇವೆನ್ನುವುದನ್ನು ಈಗಾಗಲೆ ಸನ್ಮಾನ್ಯ ಮುಖ್ಯಮಂತ್ರಿಗಳೇ ಸಾರ್ವಜನಿಕವಾಗಿ ಒಪ್ಪಿಕೊಂಡಿದ್ದಾರೆನ್ನುವಂತಹದ್ದು ಹಾಗೂ ರಾಜ್ಯಪಾಲರ ಭಾಷಣದಲ್ಲಿ ಅವರು ಏನು ಹೇಳಿದ್ದಾರೆಂದರೆ, ಏನು ಒಂದು ಆರ್ಥಿಕ ಇಲಾಖೆಯ ಒಂದು Mid Term Review Report of State Finances ಏನು ಕೊಟ್ಟಿದ್ದಾರೆ, ಅದರಲ್ಲಿ ಈ ಸಲ revenue collectionನಲ್ಲಿ ಸುಮಾರು 200 ಕೋಟಿ ರೂಪಾಯಿಗಳಷ್ಟು deficit ಬರಬಹುದು ಎಂದು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿಗೆ ಈ ಸರ್ಕಾರವು ಯಾರೂ ಮಾಡದೇ ಇರುವಂತಹ ಸಾಧನೆ ಮಾಡುವುದಕ್ಕೆ ಹೊರಟಿದ್ದೇವೆನ್ನುವಂತಹ ಮಾತನ್ನು ಹೇಳಿದ್ದಾರೆ, ಆದರೆ ಈ ಸರ್ಕಾರದ ನಡೆ ಹೇಗೆ ಇದೆ ಎಂಬ ಬಗ್ಗೆ ಅವರ ಒಂದು ಅಂಕಿ ಅಂಶಗಳೇ ಇವತ್ತು ತಿಳಿಸುತ್ತಿವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) :- ಮಾನ್ಯ ಉಪಾಧ್ಯಕ್ಷರೆ, ಅವರು 7,000 ಕೋಟಿ ರೂಪಾಯಿಗಳನ್ನು RBIನಿಂದ O.D. ತೆಗೆದುಕೊಳ್ಳುವ ಬಗ್ಗೆ ಅದನ್ನು borrow ಮಾಡುವ ಬಗ್ಗೆ provision ಇದೆ.

8,000 ಕೋಟಿ ರೂಪಾಯಿಗಳು ಖೋತಾ ಇದ್ದರೆ ಅದರಲ್ಲಿ 7,000 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಮಾಡಬಹುದು.

ಡಾ॥ ವಿ.ಎಸ್. ಆಚಾರ್ಯ(ಗೃಹ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ಜುಲೈ 17ರಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಈ ಬಗ್ಗೆ forecast ಮಾಡಿದ್ದೇವೆ. ಇದೇನು ಹೊಸದಲ್ಲ. ಅಥವಾ ಜನವರಿಯಲ್ಲಿ ಉದ್ಭವವಾದಂತಹದ್ದು ಅಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಇದರಲ್ಲಿ forecastನ್ನು ಮಾಡಿದ್ದಾರೆ.

ಡಾ॥ ವಿ.ಎಸ್. ಆಚಾರ್ಯ :- Capital Borrowing 7,000 ಕೋಟಿ ರೂಪಾಯಿಗಳು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾಡಿ ಸಾರ್. ಇವತ್ತು ಅದು ಯಾರದು, ಸಾಲ ಮಾಡಿ ತುಪ್ಪ ತಿನ್ನಬೇಕೆಂದು ಮಾಡಿದ್ದೀರಿ.

ಡಾ॥ ವಿ.ಎಸ್. ಆಚಾರ್ಯ :- ಇದನ್ನು ಎಲ್ಲಾ ಕಾಲದಲ್ಲಿಯೂ ಕೂಡ ಮಾಡಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಸಾಲ ಮಾಡಿ ತುಪ್ಪ ತಿನ್ನಿ ಪರವಾಗಿಲ್ಲ.

ಡಾ॥ ವಿ.ಎಸ್. ಆಚಾರ್ಯ :- Fiscal Responsibility Billನ ಪ್ರಕಾರ ಶೇಕಡ 3ಕ್ಕಿಂತ ನಮ್ಮ GSDP ಇರಬೇಕೆಂದು ಹೇಳಿದ್ದಾರೆ. ಮಾನ್ಯ ಸಿದ್ದರಾಮಯ್ಯನವರು ತಮ್ಮ ಪಕ್ಕದಲ್ಲಿಯೇ ಇದ್ದಾರೆ ಅವರಿಗೆ ಈ ಬಗ್ಗೆ ಗೊತ್ತಿದೆ. ನಮ್ಮದು 2.85% ಆಗಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ತಾವು 3% loanನ್ನು ಹಾಕುತ್ತಿದ್ದೀರಲ್ಲಾ?

ಡಾ॥ ವಿ.ಎಸ್. ಆಚಾರ್ಯ :- ಎಲ್ಲವೂ ಕೂಡ ಕ್ರಮಬದ್ಧವಾಗಿದೆ. ನಾವು ಮೊನ್ನೆಯವರೆಗೆ ಅದನ್ನು avail ಕೂಡ ಮಾಡಿರುವುದಿಲ್ಲ.

ಶ್ರೀ ಸಿದ್ದರಾಮಯ್ಯ (ವರುಣ) :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗೃಹಸಚಿವರೆ ತಾವು ಚೆನ್ನಾಗಿ defend ಮಾಡುತ್ತಿದ್ದೀರಿ, ಬಹಳ ಸಂತೋಷ.

ನೀವು Mid Term Review ಕೊಟ್ಟಿದ್ದೀರಲ್ಲಾ, ನೀವು ಓದಿರಬೇಕಲ್ಲವೇ? ಓದಿದ್ದೀರಾ? ಅದರಲ್ಲಿ 2300 ಕೋಟಿ ರೂಪಾಯಿಗಳಷ್ಟು revenue receiptsನಲ್ಲಿ ಖೋತಾ ಆಗಿದೆ ಎಂದು ನೀವೇ ಹೇಳಿದ್ದೀರಿ. Capital receiptsನಲ್ಲಿ ಲ್ಯಾಂಡ್ಸ್ ಮಾರಿದ್ದರೆ 3,000 ಕೋಟಿ ರೂಪಾಯಿ ಗಳು ಬರುತ್ತಿತ್ತು. ಆದರೆ ಇವತ್ತು ಸೆಪ್ಟೆಂಬರ್‌ರವರೆಗೆ 138 ಕೋಟಿ ರೂಪಾಯಿಗಳು ಬಂದಿದೆ. ಅದರಲ್ಲಿ ಸುಮಾರು 2,800 ಕೋಟಿರೂಪಾಯಿಗಳು ಹೋಯಿತು. ಒಟ್ಟು 5,100 ಕೋಟಿ ರೂಪಾಯಿಗಳು ಹೊಯಿತೇ? ನಿಮ್ಮ estimates ಪ್ರಕಾರ ಬಜೆಟ್ ಎಂದರೆ estimates. ಅದರ ಪ್ರಕಾರವೇ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದು. ಇದು ಮಾರ್ಚಿಯವರೆಗೆ ಏನು ಆಗುತ್ತದೆ ಎಂಬುದು ತಮಗೆ ಗೊತ್ತಿಲ್ಲ. ಸೆಪ್ಟೆಂಬರ್‌ವರೆಗೆ ಈ ತರಹ ಆಗಬಹುದು ಎಂದು ತಾವು forecast ಮಾಡಿದ್ದೀರಿ. ಅದು ಮಾರ್ಚಿವರೆಗೆ ಇನ್ನೂ ಜಾಸ್ತಿಯಾಗಬಹುದು. ನಿಮಗೆ revenue surplus ಬಜೆಟ್‌ನಲ್ಲಿ ಬರುತ್ತದೆಂದು ಹೇಳಿದ್ದೀರಿ. ಆಗ revenue deficit ಆಗಬಹುದು. ಮತ್ತೆ GDPಗೆ 3% ನಷ್ಟು fiscal deficit ಇರಬಹುದು. ಆಗ ಅದು 3% ನಿಂದ ಆಚೆಗೆ ಹೋಗಬಹುದು. ಏಕೆಂದರೆ ನೀವೇ estimate ಮಾಡಿಕೊಂಡಿರುವುದು 2.88%. 2.88% ಬರುತ್ತದೆ ಎಂದು ತಾವು ಹೇಳಿದ್ದೀರಿ. ತಾವು ಎರಡು ವರ್ಷದಿಂದ ನೋಡುತ್ತಾ ಹೋದರೆ ಅದು ಹೆಚ್ಚಾಗುತ್ತಾ ಹೋಗುತ್ತದೆ. 2.45%ನಿಂದ 2.88% ಆಗಿಬಿಟ್ಟಿದೆ. ಈ ವರ್ಷ ಅದು 3%ನಿಂದ ಆಚೆಗೆ ಹೋಗುತ್ತದೆ. Fiscal Responsibility Actಪ್ರಕಾರ ಅದು 3%ನೊಳಗಡೆಯೇ ಇರಬೇಕು ಎಂದು targetನ್ನು ಇಟ್ಟುಕೊಂಡಿರುವುದು. ಆದರೆ Fiscal Responsibility Actನ ವ್ಯಾಪ್ತಿಯ ಹೊರಗಡೆ ಈ ಸಾರಿ ಹೊರಟು ಹೋಗುತ್ತೀರಿ. ಅದರ ಬಗ್ಗೆ ತಾವು ಎಷ್ಟೇ defend ಮಾಡಿಕೊಂಡರೂ ಕೂಡ ಇದು ವಸ್ತುಸ್ಥಿತಿ ಇದೆ. ಈ ಬಗ್ಗೆ ನಾನು ಏನು ಹೇಳುತ್ತೇನೆಂದರೆ, ಈಗಲೇ ನೀವು ಏನಾದರೂ collective measuresನ್ನು ತೆಗೆದುಕೊಂಡರೆ ಮಾತ್ರ ಅದರ ಒಳಗಡೆ ಬರುವುದಕ್ಕೆ ಸಾಧ್ಯವೇ ಹೊರತು, ಇಲ್ಲದೆ ಹೋದರೆ ನೀವು ಹೇಳಿರುವುದೆಲ್ಲಾ ಹಣವನ್ನು ಖರ್ಚು ಮಾಡಿ Fiscal Deficit 3% ನೊಳಗಡೆಯೇ ಇರುತ್ತವೆ, Revenue surplusನಲ್ಲಿರುತ್ತವೆ. Revenue deficitಗೆ ಹೋಗುವುದಿಲ್ಲ. ಎಂದು ನೀವು ಅಂದುಕೊಂಡರೆ ಅದು ಆಗುವುದಿಲ್ಲ. It is not possible.

ಡಾ॥ ವಿ.ಎಸ್. ಆಚಾರ್ಯ :- ಇದರ ಬಗ್ಗೆ ಇಷ್ಟು ಚರ್ಚೆಯಾದುದರಿಂದ ಒಂದು informationನ್ನು ನಾನು ಈ ಸದನಕ್ಕೆ share ಮಾಡುವುದಕ್ಕೆ ಬಯಸುತ್ತೇನೆ. Empower committee of Finance Ministers ರವರು ಪ್ರತಿ ತಿಂಗಳು ನವದೆಹಲಿಯಲ್ಲಿ ಸೇರುತ್ತಿದ್ದಾರೆ ಇದರ ಬಗ್ಗೆ ತಮಗೆ ಗೊತ್ತಿದೆ. ಅಲ್ಲಿ ಎಲ್ಲಾ ರಾಜ್ಯಗಳ ವಿಶ್ಲೇಷಣೆ ಮತ್ತು revenue collections ನಮ್ಮ shortfall ಇದ್ದರೆ ಅದರ ಬಗ್ಗೆ ಎಲ್ಲವೂ ಆಗುವಾಗ ಪುಣ್ಯವಶಾತ್ ಪ್ರಮುಖ ಇತರ ರಾಜ್ಯಗಳ ತುಲನೆಯಲ್ಲಿ ಕರ್ನಾಟಕದ ಸಂಗ್ರಹ ನಿರೀಕ್ಷಿತ ಮಟ್ಟಕ್ಕೆ ಹತ್ತಿರ ಇದೆ. Maharashtra is 2% above their last year's receipt, we are 13% above.

SRI SIDDARAMAIAH :- You cannot Compare Karnataka with Bihar, Uttar Pradesh, Madhya Pradesh. You can't compare. 2004-05ಕ್ಕೆ ನಾವು ಒಂದು ವರ್ಷ ಮುಂಚಿತವಾಗಿಯೇ Fiscal Responsibility Actನಲ್ಲಿ ಹೇಳಿಕೊಂಡಿದ್ದೇವೆ. ಏನು ಮಾಡಬೇಕೆಂದು ಇದ್ದೇವೆ. ಅದನ್ನು ನಾವು achieve ಮಾಡಿ ಆಗಿದೆ. ಅದರೊಳಗಡೆಯೇ ಇಂಬೇಕಾದುದು ರಾಜ್ಯದ ಬೆಳವಣಿಗೆ ಆಗಬೇಕಾದರೆ GDP Growth ಆಗಬೇಕಾದರೆ ಅಭಿವೃದ್ಧಿ ಕೆಲಸಗಳಿಗೆ ದುಡ್ಡು ಸಿಗಬೇಕಾದರೆ ಅದರೊಳಗಡೆ ಇದ್ದರೆ ಮಾತ್ರ ಆಗುತ್ತದೆ. ಅವರು 2% Fiscal deficitಗೆ ಬಂದಿದ್ದಾರೆ, ಅವರು 3.5%ಗೆ ಬಂದಿದ್ದಾರೆ, 3 ರಿಂದ 4%ಗೆ ಬರುತ್ತೇವೆಂದು ಹೇಳುವುದಕ್ಕೆ ತಾವು ಹೋಗಬೇಡಿ.

ಡಾ॥ ವಿ.ಎಸ್. ಆಚಾರ್ಯ :- Stamps and Registration ಒಂದು ವಿಷಯವನ್ನು ಬಿಟ್ಟರೆ ಉಳಿದಿದ್ದರಲ್ಲಿ ಮತ್ತು overall ಇವತ್ತಿಗೂ 13% above last year's collection ಇದೆ. ಇನ್ನು ಎರಡನೆಯದು ಮಾನ್ಯ ಸಿದ್ದರಾಮಯ್ಯನವರೆ ಇದನ್ನು ತಾವು ಗಮನಿಸಬೇಕು. ಅಲ್ಲಿ ಆ ರಾಜ್ಯಗಳ ಎಲ್ಲಾ ಅರ್ಥಮಂತ್ರಿಗಳು ಇವರೆಲ್ಲರೂ ಬಂದಂತಹ ಸಂದರ್ಭದಲ್ಲಿ ಇವತ್ತಿನ ವಿಶೇಷ ರಿಸೆಷನ್‌ನ ಹಿನ್ನೆಲೆಯಲ್ಲಿ ಜಾಗತಿಕ ರಿಸೆಷನ್ ಅದರ ಪರಿಣಾಮವಾಗಿ ನಮ್ಮ ದೇಶ ನಮ್ಮ ರಾಜ್ಯಗಳ ಹಿನ್ನೆಲೆಯಲ್ಲಿ ನಾವು ಈ ವರ್ಷ ಮತ್ತು perhaps ಮುಂದಿನ ವರ್ಷಕ್ಕೂ State GSDPಯ ಶೇಕಡಾ 3% ಕೆಳಗಡೆ ಇರಬೇಕು. ಈ borrowing ಎನ್ನುವಂತಹದ್ದು ಇರಬೇಕು, ಎನ್ನುವುದರ

ಬಗ್ಗೆ ಕೇಂದ್ರ ಸರ್ಕಾರದ ಒಟ್ಟಿಗೆ Fiscal Responsibility Billನಲ್ಲಿ 2 ವರ್ಷಕ್ಕೆ ರಿಯಾಯಿತಿ ಕೇಳಬೇಕು ಎಂದು ಅಲ್ಲಿಯವರೆಗೆ ಹೋಗಿತ್ತು. ಕರ್ನಾಟಕದ ಪರಿಸ್ಥಿತಿ ಆ ಮಟ್ಟಕ್ಕೆ ಹೋಗುವುದಿಲ್ಲ. ಅದನ್ನು ಈಗಲೇ ನಾವು ನಿಶ್ಚಯ ಮಾಡುವುದು ಬೇಡ. ಹಾಗಾಗಿ this is a phenomenon which is effecting all the States perhaps we are little shade better. Thank Q.

ಶ್ರೀ ಸಿದ್ದರಾಮಯ್ಯ :- ಆ ತರಹ ತಾವು defend ಮಾಡಿಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಆವತ್ತಿನ ಪರಿಸ್ಥಿತಿಯೇ ಬೇರೆ ಇತ್ತು.

ವೀರಣ್ಣ ಚರಂತಿಮಠ್ :- ಮಾನ್ಯ ಉಪಾಧ್ಯಕ್ಷರೆ, ನಾನು ಪಿಯರ್‌ಲೆಸ್ ಬಗ್ಗೆ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ :- ಅದು ಪಿಯರ್‌ಲೆಸ್ ಕಂಪನಿಯದು. ತಾವು ಮೊಯಲಿಯವರ ಕಾಲದಲ್ಲಿ ತೆಗೆದುಕೊಂಡಿರುವುದನ್ನು ತಾವು ಈಗ ಹೇಳುತ್ತಾ ಕುಳಿತಿದ್ದೀರಲ್ರಿ? Fiscal Responsibility Act ನಾನು ಆ ಬಗ್ಗೆ ಹೇಳುತ್ತೇನೆ ತಾವು ಕುಳಿತುಕೊಳ್ಳಿ. Fiscal Responsibility Actನ್ನು ಪಾಸ್ ಮಾಡಿರುವುದು 2002ರಲ್ಲಿ. ಈ ಬಗ್ಗೆ ತಾವು ಸ್ವಲ್ಪ ಕೇಳಿ. 2002ರಿಂದ ಈಚೆಗೆ ನಾವು ಹದಗೆಟ್ಟಿದಂತಹ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡುವ ಬಗ್ಗೆ ಅನೇಕ ತೀರ್ಮಾನಗಳನ್ನು ಮಾಡಿದ್ದೇವೆ. ಅದು ಆದ ಮೇಲೆ ಸುಮಾರು 3000,-4,000 ಕೋಟಿ ರೂಪಾಯಿಗಳು ಹೆಚ್ಚಾಗಿ revenue deficit ಇತ್ತು. ಅದನ್ನು ತೆಗೆದುಹಾಕಿ ಸುಮಾರು 1,600 ಕೋಟಿ ರೂಪಾಯಿಗಳಷ್ಟು 2004-05ರಲ್ಲಿ surplus, 2005-06ರಲ್ಲಿ 2000 ಕೋಟಿಗಿಂತ ಜಾಸ್ತಿಯಾಯಿತು. ಕಳೆದ ವರ್ಷವೂ ಸಹ ಇತ್ತು. ಈ ವರ್ಷ ಆ ದಾರಿಯಿಂದ ತಪ್ಪಿದೆ ಎನ್ನುವಂತಹದ್ದು ಪ್ರಶ್ನೆ. ನೀವು ಪಿಯರ್‌ಲೆಸ್ ಸಾಲ ತೆಗೆದುಕೊಳ್ಳುವ ಬಗ್ಗೆ ತಾವು ಹೇಳಿದ್ದೀರಲ್ಲಾ. ಸಾಲ ಮಾಡಿಕೊಂಡು ಏನು ಮಾಡುತ್ತೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ತಾವು ಸಾಲವನ್ನು ತೆಗೆದುಕೊಂಡು ಮಾಡಿಕೊಳ್ಳಿ.

ಶ್ರೀ ಸಿದ್ಧರಾಮಯ್ಯ :- ತಾವು ಈ ರೀತಿಯಾಗಿ ಮಾಡಿಕೊಂಡರೆ ರಾಜ್ಯವು ಹಾಳಾಗಿಹೋಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ತಾವು ಮೈ ತುಂಬಾ ಮಾಡಿಕೊಳ್ಳಿ.

ಉಪಾಧ್ಯಕ್ಷರು :- ಮಾನ್ಯ ಕುಮಾರಸ್ವಾಮಿಯವರೆ ತಾವು ಮಾತನಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಆವತ್ತಿನ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿದೆ. ಆದ್ದರಿಂದ ಈ ಸರ್ಕಾರ ಯಾವ ಘೋಷಣೆಗಳನ್ನು ಮಾಡುತ್ತಾರೆ ಅದು ಘೋಷಣೆಗಳಾಗಿ ಇರುತ್ತದೆ. ಅದು ಕಲರ್ ಪುಸ್ತಕದಲ್ಲಿ ಏನು ಭದ್ರಬುನಾದಿ ಎಂದು ಹೇಳಿದ್ದಾರೆ. 200 ದಿನಗಳ ಸಾಧನೆಗಳ ಬಗ್ಗೆ ಹೇಳಿದ್ದಾರೆ, ಸಾಧನೆಗಳ booksನಲ್ಲಿ ಇರುತ್ತದೆಯೇ ಹೊರತು ರಾಜ್ಯದ ಜನತೆಗೆ ಕಣ್ಣಿಗೆ ಕಾಣತಕ್ಕಂತಹದ್ದನ್ನು ಬಹುಶಃ ನಾವ್ಯಾರೂ ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಿಲ್ಲವೆನ್ನತಕ್ಕಂಹದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ರಾಜ್ಯಪಾಲರ ಭಾಷಣದಲ್ಲಿ ಅಧ್ಯಕ್ಷರೆ, ಈ ಜನರ ಬಳಿಗೆ ಈ ಸರ್ಕಾರವೆಂದು ಇನ್ನೊಂದು ಪ್ರಮುಖವಾದ ಅಂಶವನ್ನು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೆ ಐದು ಲಕ್ಷ ಅರ್ಜಿಗಳು ಬಂದಿವೆ. ಅದರಲ್ಲಿ ಮೂರು ಲಕ್ಷ ಅರವತ್ತು ಸಾವಿರ ಅರ್ಜಿಗಳನ್ನು ವಿಲೇವಾರಿ ಮಾಡಿದ್ದಾರೆ. ವಿಲೇವಾರಿ ಅಂದರೆ ಕೆಲಸ ಮಾಡುವುದರ ಮೂಲಕ ವಿಲೇವಾರಿ ಆಗಿದೆಯೊ, ಇಲ್ಲ ಅವರು ಕೊಟ್ಟಂಥ ಅರ್ಜಿಗಳನ್ನು ಆಯಾಯ ಇಲಾಖೆಗಳಲ್ಲಿ ಕಳುಹಿಸಿ ಅದು ಅಲ್ಲಿ ಬುಟ್ಟಿಗೆ ಸೇರಿದೆಯೋ ಎನ್ನುವುದು ಅವರ ಪ್ರಶ್ನೆ. ನಾನು ಹೋದ ಭಾನುವಾರ ಕುಮಟಾಗೆ ಒಂದು ಕಾರ್ಯಕ್ರಮಕ್ಕೆ ಹೋಗಿದ್ದೆ. ಆಗ ನನಗೆ ಸಣಕಪ್ಪ ಅಜ್ಜಪ್ಪ ಎಂಬ 80 ವರ್ಷದ ವ್ಯಕ್ತಿ ಒಂದು ಅರ್ಜಿಯನ್ನು ಕೊಟ್ಟರು. ಇವತ್ತಿನವರೆಗೆ ಯಾವ ಅಧಿಕಾರಿಗಳು ಅವರಿಗೆ ಇದುವರೆಗೆ ವೃದ್ಧಾಪ್ಯ ವೇತನ ಕೊಡಿಸುವಂಥ ಕೆಲಸ ಮಾಡಿಲ್ಲ. ಕಳೆದ ವಾರ ನನ್ನ ಮುಂದೆ ಬಂದಂಥ ಒಂದು ಮನವಿಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಜನ ಸ್ಪಂದನ ಕಾರ್ಯಕ್ರಮ ಎಷ್ಟರಮಟ್ಟಿಗೆ success ಆಗುತ್ತಿದೆ ಎನ್ನುವ ಬಗ್ಗೆ ಇವತ್ತೇನು ತಾವು ಹೇಳಿಕೊಂಡಿದ್ದೀರಿ, ಆ ಮಟ್ಟದಲ್ಲಿಲ್ಲ. ಜನರಿಗೆ ನಿರಾಸೆಯಾಗಿ ಜನ ಆ ಕಾರ್ಯಕ್ರಮಕ್ಕೆ ಬರುವುದು ಕಡಿಮೆ ಆಗುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಅಧ್ಯಕ್ಷರೆ, ಹೈದರಾಬಾದ್-ಕರ್ನಾಟಕಕ್ಕೆ ವಿಶೇಷವಾದ ಸ್ಥಾನಮಾನದ ಬಗ್ಗೆ ನಮ್ಮನ್ನೆಲ್ಲ

ನಮ್ಮ ಮುಖ್ಯಮಂತ್ರಿಗಳು ಕರೆದರು, ಕಾಂಗ್ರೆಸ್ ಹಾಗೂ ಜೆ.ಡಿ.ಎಸ್. ಪಕ್ಷಗಳವರು ನೀವು ಬನ್ನಿ, ನಾವೆಲ್ಲಾ ಒಟ್ಟಾಗಿ ನಿಯೋಗ ಹೋಗೋಣ. ನಾವೆಲ್ಲಾ ಒಟ್ಟಾಗಿ ಹೋಗಿ ಕೇಂದ್ರ ಸರ್ಕಾರದ ಮುಂದೆ ನಮ್ಮ ಶಕ್ತಿ ಪ್ರದರ್ಶನ ಮಾಡಿ ನಾವೆಲ್ಲಾ ಒಗ್ಗಟ್ಟಾಗಿದ್ದೇವೆ. ನಮಗೆ ಹೈದರಾಬಾದ್ ಕರ್ನಾಟಕಕ್ಕೆ ವಿಶೇಷವಾದಂಥ ಸ್ಥಾನಮಾನವನ್ನು ಕಲ್ಪಿಸಿ ಕೊಡಬೇಕೆಂದು ಹೇಳಿ Article 371 ಅನ್ನು implement ಮಾಡಬೇಕೆಂದು ಹೇಳುತ್ತಾರೆ, ಇವತ್ತು ರಾಜಕೀಯಕ್ಕೋಸ್ಕರವಾಗಿ ಈ ರೀತಿ ನಿಯೋಗ ಕರೆದುಕೊಂಡು ಹೋಗುವುದೇನಿದೆ? ಇದರ ಬಗ್ಗೆ ನಾನೊಂದು ಮಾತನ್ನು ಹೇಳಬಯಸುತ್ತೇನೆ, ಸದನದಲ್ಲಿ ಅದನ್ನು ಯಾರೂ ಅನ್ಯಥಾ ಭಾವಿಸಬಾರದು. ಏನು N.D.A ಸರ್ಕಾರ ಇದ್ದಾಗಲೇ ಈ ರಾಜ್ಯದಿಂದ 18 ಬಿಜೆಪಿ ಲೋಕಸಭಾ ಸದಸ್ಯರು ಆಯ್ಕೆಯಾಗಿ ಆ ಸಂದರ್ಭದಲ್ಲಿ ಪ್ರಮುಖವಾದಂಥ ಸರ್ಕಾರ ನಡೆಸುವಂತಹದ್ದರಲ್ಲಿ ನಿಮ್ಮ ಪಾಲುದಾರಿಕೆ ಏನಿತ್ತು, ಆ ಸಂದರ್ಭದಲ್ಲಿ Article 371 ಅನ್ನು implement ಮಾಡಬೇಕೆಂದು ಹೇಳಿ ನಮ್ಮ ಸರ್ಕಾರ ಅಲ್ಲಿಗೆ ಹೋಗಿ ಅವರ ಮುಂದೆ ಮನವಿಯನ್ನು ಕೊಟ್ಟಾಗ N.D.A ಸರ್ಕಾರದ ಗೃಹ ಸಚಿವರು ಲೋಕಸಭೆಯಲ್ಲಿ ಇದ್ಯಾವುದೇ ಕಾರಣಕ್ಕೂ ಇದನ್ನು ಮಾಡಲಿಕ್ಕೆ ಸಾಧ್ಯವಿಲ್ಲವೆಂದು ಆಗಲೇ ತಿರಸ್ಕರಿಸಿದ್ದಾರೆ. ಇವತ್ತು ವಿರೋಧ ಪಕ್ಷದವರು ನಮಗೆ ಸಹಕಾರ ಕೊಡುವುದಿಲ್ಲ. ನಾವು ಅಭಿವೃದ್ಧಿ, ಅಭಿವೃದ್ಧಿ ಎಂದರೆ ವಿರೋಧ ಪಕ್ಷದವರು ನಮಗೆ ಯಾವುದೇ ಸಲಹೆಗಳನ್ನು ಕೊಡದೆ ನಾವು ಮಾತನಾಡುವುದಕ್ಕೆಲ್ಲಾ ಬರೀ ಟೀಕೆಗಳನ್ನು ಮಾಡುವುದರಲ್ಲೇ ಅವರು ಕಾಲ ಕಳೆಯುತ್ತಾರೆಂಬ ಮಾತನ್ನು ಹೇಳುತ್ತಾರೆ ಅಧ್ಯಕ್ಷರೆ, ಇವತ್ತು ನಿಮ್ಮ ಕೈಯಲ್ಲಿಯೇ ಆ ಶಕ್ತಿ ಇದ್ದಾಗ, ಅನುಷ್ಠಾನಕ್ಕೆ ತರಲಿಕ್ಕೆ ಅವಕಾಶಗಳಿದ್ದಾಗ ಆ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರದೆ ಇವತ್ತು ಬೇರೆ ಪಕ್ಷಗಳ ಮೇಲೆ ಈ ರೀತಿ ನೀವು ಪದೇ ಪದೇ ಆಪಾದನೆಯನ್ನು ಮಾಡತಕ್ಕದ್ದು ಸರಿಯಾದಂಥ ಕ್ರಮವಲ್ಲವೆಂದು ಈ ಸಂದರ್ಭದಲ್ಲಿ ಸದನದ ಗಮನಕ್ಕೆ ತರಬಯಸುತ್ತೇನೆ. ಕೃಷಿಕರ ಕನಸನ್ನು ನನಸು ಮಾಡಿದ್ದೇವೆಂದು ಹೇಳುತ್ತಾರೆ. ಇವತ್ತು 500 ಕೋಟಿ ರೂ.ಗಳನ್ನು ಬಜೆಟ್ಟಿನಲ್ಲಿ 1,000 ರೂ.ಗಳ ಬಿತ್ತನೆ ಬೀಜ, ಗೊಬ್ಬರ ಖರೀದಿ ಮಾಡುವುದಕ್ಕೆಂದು ಇಟ್ಟರು. ನಾನು ಆ ಸಂದರ್ಭದಲ್ಲೇ ಹೇಳಿದೆ. ಅದೇ 500 ಕೋಟಿ ರೂಗಳನ್ನು 1,000 ರೂ.ಗಳಂತೆ ಕೊಡುವುದರ ಬದಲು ಒಂದು ವಿಶೇಷವಾದಂಥ ಕಾರ್ಯಕ್ರಮವನ್ನು ಶಾಶ್ವತವಾಗಿ ಅನುಷ್ಠಾನಕ್ಕೆ ತರುವುದಕ್ಕೆ ಅದೇ 500 ಕೋಟಿ ಹಣವನ್ನು ಉಪಯೋಗಿಸುವುದರಿಂದ ಇವತ್ತು ರೈತರಿಗೆ ಏನಾದರೂ

ಒಂದು ಶಾಶ್ವತವಾದ ಕಾರ್ಯಕ್ರಮವನ್ನು ಕೊಡಿ ಎಂದು ಹೇಳಿದ್ದೆವು. ನಾವು 210 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆಂದು ಇವತ್ತು ನೀವು ಹೇಳುತ್ತಿದ್ದೀರಿ. ಇದರಲ್ಲಿ ಇನ್ನೂ ಎಷ್ಟು ಜನಕ್ಕೆ ಹಣ ತಲುಪಿದೆ ಗೊತ್ತಿಲ್ಲ ನಮಗೆ. ಆ ಹಣ ತೆಗೆದುಕೊಳ್ಳುವ ರೈತನಿಗೇನಾಗಿದೆ ಅಂದರೆ ಇವತ್ತು ಅವನು ಕನಿಷ್ಠ 500 ರಿಂದ 700 ರೂ.ಗಳನ್ನು ಖರ್ಚು ಮಾಡಬೇಕಾದಂಥ ಪರಿಸ್ಥಿತಿ ಇದೆ. ಅಲ್ಲಿಗೆ ನೀವು ಕೊಡುವಂಥದ್ದು ಕೇವಲ 200 ಅಥವಾ 250 ರೂಪಾಯಿಗಳು ಆ ರೈತನ ಪಾಕೆಟ್‌ಗೆ ಹೋಗಬಹುದಷ್ಟೇ. ಇದು ಒಂದು ದೊಡ್ಡ ಸಾಧನೆ ಎಂದು ತಾವು ಪದೇ ಪದೇ ಹೇಳುತ್ತೀರಿ. ಈ ಹಣ ನಿಜಕ್ಕೂ ರೈತರಿಗೆ ಯಾವುದೇ ಕಾರಣಕ್ಕೂ ಉಪಯೋಗ ಆಗದೇ ಇರುವಂಥದ್ದು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಚೈನಾಗೆ ತಂಡವನ್ನು ಕಳುಹಿಸುತ್ತಿದ್ದೇವೆಂದು ಹೇಳುತ್ತೀರಿ, ಇದರ ಬಗ್ಗೆ ಮಾಧ್ಯಮದಲ್ಲೇ ಒಂದು ಆರ್ಟಿಕಲ್ ಬಂತು. ಮೊದಲನೇ ತಂಡ ತಾವೇನು ಕಳುಹಿಸಿದ್ದೀರಿ, ನೀವು ಯಾರ್‍ಯಾರನ್ನು, ಯಾವ ಪಕ್ಷದವರನ್ನು ಕಳುಹಿಸಿದ್ದೀರಿ, ಅದರ ಬಗ್ಗೆ ನಾನು ಚರ್ಚಿಸುವುದಿಲ್ಲ. ಏಕೆಂದರೆ ಎಲ್ಲಾ ಪಕ್ಷಗಳಲ್ಲೂ ರೈತರಿದ್ದಾರೆ. ಇವತ್ತು ಪಕ್ಷದ ಕಾರ್ಯಕರ್ತರಾಗಿರುತ್ತಾರೆ. ನೀವು ಕಳುಹಿಸಿರುತ್ತೀರಿ. ಅದಕ್ಕೆ ನನ್ನ ಟೀಕೆ ಇಲ್ಲ. ಆದರೆ ನೀವು ಕಳುಹಿಸಿದಂಥ ಉದ್ದೇಶಗಳು ನಿಜಕ್ಕೂ ಸಫಲವಾಯಿತೇ? ಇವತ್ತು ಸರ್ಕಾರದ ಹಣವನ್ನು ನೀವು ಈ ರೀತಿ ವಿನಿಯೋಗ ಮಾಡಬೇಕಾದರೆ ಅಧ್ಯಯನ ಮಾಡಲಿಕ್ಕೆ ನಾವು ಕಳುಹಿಸುತ್ತಿದ್ದೇವೆಂಬ ಮಾತನ್ನು ಹೇಳಿದ್ದೀರಿ, ಇವತ್ತು ಪಕ್ಕದಲ್ಲೇ ಮಹಾರಾಷ್ಟ್ರದಲ್ಲೇ ಬಾರಾಮತಿ ಕ್ಷೇತ್ರ ಇದೆ. ಶರದ್ ಪವಾರ್‌ರವರು ಕೇಂದ್ರದ ಕೃಷಿ ಸಚಿವರಿದ್ದಾರೆ. ಅವರ ಕ್ಷೇತ್ರದಲ್ಲಿ ಮಾಡಿರುವಂಥ ಸಾಧನೆಗಳನ್ನು ನೋಡಿದರೆ, ಅಲ್ಲಿ ರೈತರ ಅಭಿವೃದ್ಧಿಗೆ ಯಾವ ರೀತಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಯಾವ ರೀತಿ ಆ ಕ್ಷೇತ್ರಗಳು ಬದಲಾವಣೆ ಆಗಿದೆ ಎಂಬುದು ಗೊತ್ತಾಗುತ್ತದೆ. ಅದೇ ರೀತಿ ಸಂಘಟನೆಗಳ ಮೂಲಕ ಹಲವಾರು ಸಮಾಜ ಸೇವೆಯನ್ನು ಮಾಡುವಂಥ ಹಲವಾರು ಜನರು ತೆಗೆದುಕೊಂಡಿರುವಂಥ ಹಲವಾರು ರೀತಿಯ ಕಾರ್ಯಕ್ರಮಗಳು ಇವೆ. ಇವತ್ತು ನಮ್ಮ ದೇಶದಲ್ಲೇ ಹಲವಾರು ರೀತಿಯ ದೊಡ್ಡ ದೊಡ್ಡ ಸಾಧನೆಗಳನ್ನು ಮಾಡಿರುವಂಥ ಸ್ಥಳಗಳಿವೆ. ನೀವು ವಿದೇಶಗಳಿಗೆ ಕಳುಹಿಸಿ ಅಲ್ಲಿ ಅವರಿಗೆ ತರಬೇತಿ ಕೊಡಿಸುತ್ತೀರೋ, ಅದರಿಂದ ಅವರಿಗೆ ಕೃಷಿಯಲ್ಲಿ ತಿಳುವಳಿಕೆ ಮೂಡುತ್ತದೋ ನನಗಂತೂ ಗೊತ್ತಿಲ್ಲ. ಆದರೆ ಇವತ್ತು ಯಾವೊಂದು ಉದ್ದೇಶದಿಂದ ನೀವು ಈ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ, ಅದರಲ್ಲಿ ಎಷ್ಟು ಸಫಲರಾಗುತ್ತೀರಿ ಎನ್ನುವಂಥದ್ದು ಮುಂದಿನ

ದಿನಗಳಲ್ಲಿ ಕಾದು ನೋಡೋಣ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ರಸಗೊಬ್ಬರವನ್ನು ಖರೀದಿ ಮಾಡಲಿಕ್ಕೆ ರಸಗೊಬ್ಬರ ಸಹಕಾರ ಮಾರಾಟ ಮಹಾಮಂಡಳಿಗೆ ನಮ್ಮ ಮುಖ್ಯಮಂತ್ರಿಗಳು ಕಳೆದ ವಿಧಾನಸಭೆಯ ಕಲಾಪದಲ್ಲಿ ಗೊಬ್ಬರದ ಸಮಸ್ಯೆ ಬಂದಾಗ ನಿಮಗೆ 500 ಕೋಟಿ ರೂ.ಗಳ ಚೆಕ್ ಅನ್ನು ಇಲ್ಲೇ ಕೊಟ್ಟುಬಿಡುತ್ತೇನೆ, ನೀವು ಗೊಬ್ಬರವನ್ನು ತಂದು ಬಿಡಿ ನೋಡೋಣ ಎಂದರು. ಆವತ್ತು ಸರ್ಕಾರದಿಂದಲೇ 500 ಕೋಟಿ ರೂ.ಗಳನ್ನು ಕೊಟ್ಟುಬಿಡುತ್ತೇನೆಂದರು. ಆಮೇಲೆ ನಾವೇ ಹೇಳಿದೆವು, ನಾವು ಹಿಂದೆ ಇದ್ದಂಥ ಸರ್ಕಾರದಲ್ಲಿ 25 ಕೋಟಿ ಹಣ ಇಟ್ಟು, 8 ಕೋಟಿ ರೂ.ಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಇವತ್ತು ಕರ್ನಾಟಕ ಸಹಕಾರ ಮಹಾಮಂಡಳದಿಂದ ಗೊಬ್ಬರವನ್ನು ಖರೀದಿ ಮಾಡಲಿಕ್ಕೆ ಏನು ಅವಕಾಶ ಇದೆ ಅದನ್ನು ಮಾಡಿ ಎಂದಾಗ ಮಾಡಲಿಕ್ಕೆ ಬರುವುದಿಲ್ಲವೆನ್ನುವಂಥ ಮಾತನ್ನು ಹೇಳಿದಿರಿ. ಆಮೇಲೆ ಸರಿಯಾದ ಮಾಹಿತಿಯನ್ನು ತೆಗೆದುಕೊಂಡು ಸರ್ಕಾರದಿಂದ ಗ್ಯಾರಂಟಿಯನ್ನು ಕೊಟ್ಟು ಬ್ಯಾಂಕ್‌ಗಳಿಂದ ಸಾಲ ಪಡೆಯಲಿಕ್ಕೆ ಅನುಮೋದನೆಯನ್ನು ಕೊಟ್ಟಿರಿ. ಇವತ್ತು ಈ ಸರ್ಕಾರದಲ್ಲಿ ಯಾವುದೇ ಒಂದು ಕಾರ್ಯಕ್ರಮವನ್ನು ತರಬೇಕಾದರೆ ಕಳಕಳಿ ಆಗಲಿ, ಬದ್ಧತೆ ಆಗಲಿ ಇಲ್ಲ, ಯಾವರೀತಿಯಾದ ತೀರ್ಮಾನಗಳನ್ನು ಮಾಡಬೇಕೆಂಬುದರಲ್ಲಿ ಒಂದು ರೀತಿಯ ಅಧಿಕಾರಿಗಳಲ್ಲಿ ಮತ್ತೆ ಸಚಿವರಲ್ಲಿ ಒಂದು ರೀತಿಯ ಭಿನ್ನಾಭಿಪ್ರಾಯಗಳು ಇರತಕ್ಕಂಥದ್ದನ್ನು ಹಲವಾರು ಘಟನೆಗಳಲ್ಲಿ ನಾವು ಕಾಣಬಹುದೆಂದು ಹೇಳಬಯಸುತ್ತೇನೆ. ಗುಣ ಮಟ್ಟದ ಬೀಜ ಪೂರೈಕೆ ಮಾಡುವ ವಿಷಯದಲ್ಲಿ ನಾವು ನೀವು ಇಬ್ಬರು ಒಟ್ಟಿಗೆ ಇದ್ದಾಗಲೇ ಸುಮಾರು 85, 90 ಕೋಟಿ ರೂ.ಗಳನ್ನು ಕೊಟ್ಟೆವು. ಆದರೆ ನೀವು ಈ ಬಾರಿ ಇಟ್ಟಿರುವುದು ಕೇವಲ 44.00 ಕೋಟಿ ರೂ.ಗಳಷ್ಟೆ. ಇದೇನು ನಿಮ್ಮ ದೊಡ್ಡ ಸಾಧನೆಯಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಬೇಕಾದರೆ ನಿನ್ನೆ ನೀವು ನಡೆಸಿದಂಥ ಸುಭಾಶ್‌ಚಂದ್ರ ಬೋಸ್‌ರವರ ಜನ್ಮ ಶತಾಬ್ದಿ ಕಾರ್ಯಕ್ರಮದ ಬಗ್ಗೆ ಹೇಳುತ್ತಿದ್ದರು. ಪ್ರತಿಯೊಂದು ಕಾರ್ಯಕ್ರಮವನ್ನು ನೀವು ಮಾಡಬೇಕಾದರೆ ಅದರ ಹಿಂದೆ ನಿಮ್ಮ ಉದ್ದೇಶ ಇಟ್ಟುಕೊಂಡಿರುವುದು, ಅಭಿವೃದ್ಧಿಗಿಂತ ಹೆಚ್ಚಾಗಿ ಎಲ್ಲೋ ಒಂದು ಕಡೆ ನಿಮ್ಮ ಪಕ್ಷದ ಕಾರ್ಯಕ್ರಮಗಳನ್ನು ವೃದ್ಧಿ ಮಾಡಿಕೊಳ್ಳಲಿಕ್ಕೆ, ನಿಮ್ಮ ಪಕ್ಷವನ್ನು ಬಲಪಡಿಸಿಕೊಳ್ಳಲಿಕ್ಕೆ ಹೊರಟಿದ್ದೀರಿ. ಇವತ್ತು ಇನ್ನೊಂದು ವಿಷಯವನ್ನು ಹೇಳಬಯಸುತ್ತೇನೆ. ತಾವು ಸಾವಯವ ಗೊಬ್ಬರಕ್ಕೆ ಪ್ರೋತ್ಸಾಹ ಕೊಡಬೇಕೆಂದು

ನಿರ್ಧಾರವನ್ನೇನು ಮಾಡಿದ್ದೀರಿ, ನೀವು ರೈತರನ್ನು ಆಯ್ಕೆ ಮಾಡಲು ಕಮಿಷನ್ ಏನು ಮಾಡಿಕೊಂಡಿದ್ದೀರಿ, ಅದರಲ್ಲಿ ಯಾವ ಗೈಡ್‌ಲೈನ್ಸ್ ಇಟ್ಟುಕೊಂಡು ಆ ಕಮಿಷನ್ ಮೂಲಕ ಕೆಲಸ ಮಾಡಿಸುತ್ತಿದ್ದೀರೋ ಗೊತ್ತಿಲ್ಲ. ಅದೂ ಒಂದು ರೀತಿ ಕೇಸರೀಕರಣ ಮಾಡಿಕೊಳ್ಳಲಿಕ್ಕೆ, ಆ ಸಾವಯವ ಗೊಬ್ಬರ ನೀತಿಯನ್ನು ಅನುಷ್ಠಾನಕ್ಕೆ ತರತಕ್ಕಂಥದ್ದಕ್ಕೂ ನೀವು ಕೇಸರೀಕರಣ ಮಾಡಿಕೊಳ್ಳಲಿಕ್ಕೆ ಹೊರಟ್ಟಿದ್ದಾರೆ ಎಂಬುದನ್ನು ನಿಮ್ಮ ಕಾರ್ಯಕ್ರಮಗಳನ್ನು ನಡೆಸುತ್ತಿರುವುದನ್ನು ನೋಡಿದಾಗ ಯಾರಿಗೇ ಆಗಲಿ ಆ ರೀತಿಯ ಭಾವನೆ ಬರುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದಕ್ಕೆ ಕಾರಣ ಧರ್ಮಸಿಂಗ್ ಕಾಲದಲ್ಲೇ ಸಾವಯವ ಗೊಬ್ಬರಗಳನ್ನು ರೈತರು ಉತ್ಪತ್ತಿ ಮಾಡಬೇಕೆಂದು ಪ್ರೋತ್ಸಾಹ ಕೊಡಲಿಕ್ಕೆ 28 ಜಿಲ್ಲೆಗಳಲ್ಲಿ 28 ಹಳ್ಳಿಗಳನ್ನು ಆಯ್ಕೆ ಮಾಡಿ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ನಂತರ ಸಮ್ಮಿಶ್ರ ಸರ್ಕಾರ ಬಂದ ಮೇಲೆ ರಾಜ್ಯದ 224 ಕೇಂದ್ರಗಳಲ್ಲಿ ಒಂದೊಂದು ಹಳ್ಳಿಯನ್ನು ಆಯ್ಕೆ ಮಾಡಿ ಈ ಸಾವಯವ ಗೊಬ್ಬರವನ್ನು ಉತ್ಪಾದನೆ ಮಾಡತಕ್ಕಂಥದ್ದಕ್ಕೆ ಪ್ರೋತ್ಸಾಹ ಕೊಡತಕ್ಕಂಥ ಕಾರ್ಯಕ್ರಮವನ್ನು ತಂದರು. ಅದನ್ನು ಬೇರೆ ರೀತಿ ನೀವೇನು ಮಾಡಲಿಕ್ಕೆ ಹೊರಟಿದ್ದೀರಿ, ಅದರಲ್ಲಿ ಇವತ್ತು ಏನು ಈ ಕಾರ್ಯಕ್ರಮಕ್ಕೆ ಸದಸ್ಯರು ಮಾಡಿಕೊಳ್ಳುವಂಥ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೀರಿ. ಅದು ಯಾವ ಕಾರಣಕ್ಕೆ ಎಂಬುದನ್ನು ಊಹೆ ಮಾಡಬಹುದು ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ನೀರಾವರಿ ಬಗ್ಗೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದರು, ಬಜೆಟ್ಟಿನಲ್ಲಿ ಇಟ್ಟಂಥ ಹಣದಲ್ಲಿ ನೀವು ಇವತ್ತೇನು ಹಣ ಖರ್ಚು ಮಾಡಿದ್ದೀರಿ, ಅದು ಯಾವ ಒಂದು ಮಟ್ಟಕ್ಕೆ ಬಂದು ನಿಂತಿದೆ? ಎಲ್ಲಾ ಪಕ್ಷಗಳ ಉತ್ತರ ಕರ್ನಾಟಕದ ಭಾಗದ ಸದಸ್ಯರುಗಳು ನೀರಾವರಿಯ ವಿಷಯದಲ್ಲಿ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದರು. ನಮಗೆ ಕೇವಲ 6 ತಿಂಗಳ ಅವಧಿ ಮಾತ್ರ ಸಿಕ್ಕಿರುವುದರಿಂದ ಹಣವನ್ನು ಖರ್ಚು ಮಾಡುವುದಕ್ಕೆ ಸಮಯದ ಅಭಾವ ಇತ್ತೆಂದು ಹೇಳುತ್ತಿದ್ದೀರಿ. ಸಮಯದ ಅಭಾವಕ್ಕಿಂಥ ಹೆಚ್ಚಾಗಿ ಹಣವನ್ನು ತೊಡಗಿಸಿ ಆ ಕಾರ್ಯಕ್ರಮವನ್ನು ಜಾರಿಗೆ ತರತಕ್ಕಂಥದ್ದರಲ್ಲಿ ಬದ್ಧತೆಯನ್ನು ತೋರಿಸುವುದರಲ್ಲಿ ನೀವು ಎಡವಿದ್ದೀರಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ರಾಷ್ಟ್ರಪತಿಯವರ ಆಡಳಿತ ಇದ್ದ ಸಂದರ್ಭದಲ್ಲಿ Major, Medium, Minor Irrigation Projectಗಳಿಗೆ 4.5 ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಇಟ್ಟಿದ್ದರು. ಮಾನ್ಯ ದೇವೇಗೌಡರು ಪ್ರಧಾನಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ

Accelerated Irrigation Benefit Scheme ನಲ್ಲಿ ಹಣ ಬರುತ್ತಿತ್ತು. 4.5 ಸಾವಿರ ಕೋಟಿ ರೂಪಾಯಿಗಳ ಜೊತೆಗೆ Accelerated Irrigation Benefit Scheme ನಲ್ಲಿ 500 ಕೋಟಿ ರೂಪಾಯಿ ದೊರಕುತ್ತದೆಂದು ರಾಷ್ಟ್ರಪತಿಗಳ ಭಾಷಣದಲ್ಲಿ ಆವತ್ತೇನು ಈ ಹಣವನ್ನು ಇಟ್ಟಿದ್ದರು, ಅದರಲ್ಲಿ ಖರ್ಚು ಮಾಡುವಂಥದ್ದರಲ್ಲಿ ಹಣ ಬಿಡುಗಡೆ ಮಾಡಿ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ತರುವಂಥದ್ದರಲ್ಲಿ ಸಮಯವನ್ನು ಹಾಳು ಮಾಡಿಕೊಂಡಿದ್ದೀರಿ ಎಂದು ನಾನು ಹೇಳಬಯಸುತ್ತೇನೆ. ಅದಕ್ಕೆ ಕಾರಣ ನಿಮ್ಮ ಪಕ್ಷವನ್ನು ಸಂಘಟನೆ ಮಾಡಿಕೊಳ್ಳಲಿಕ್ಕೆ ಆಪರೇಷನ್ ಕಮಲದ ಕಡೆ ಹೆಚ್ಚಿನ ಗಮನವನ್ನು ಕೊಟ್ಟಿದ್ದರಿಂದ ಈ ನೀರಾವರಿಯ ಕಾರ್ಯಕ್ರಮಗಳ ಬಗ್ಗೆ ಈ ಭಾಗದ ಶಾಸಕರ ನಿರೀಕ್ಷೆ ಏನಿತ್ತು, ಆ ನಿರೀಕ್ಷೆ ತಲುಪುವುದಕ್ಕೆ ನಿಮಗೆ ಎಲ್ಲೋ ಸಮಯ ಸಿಗಲಿಲ್ಲವೆಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ದಂಡಾವತಿ ನೀರಾವರಿ ಯೋಜನೆ ಜಾರಿಗೆ ತರಲು ಹೊರಟ್ಟಿದ್ದೀರಿ. ಇವತ್ತು ಇನ್ನೂ ಭೂಮಿಯನ್ನು acquire ಮಾಡಿಕೊಳ್ಳುವುದಕ್ಕೆ ಆಗಿಲ್ಲ. ಅಲ್ಲಿ ಒಂದು ರೀತಿಯ ಗೊಂದಲವಿದೆ. ಬೇರೆ ಕಾರ್ಯಕ್ರಮಗಳಿಗಾದರೂ, ಅಲ್ಲಿರುವ ಸಮಸ್ಯೆಯನ್ನು ಬಗೆಹರಿಸಿ, ಆ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡಿಕೊಳ್ಳುವುದಕ್ಕೆ, ನೀವು ಗಮನಕೊಡಿ. ಅಲ್ಲಿ ಇವತ್ತು ಏನು 270 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದೀರಿ, ಇವತ್ತು ಅದೇ ಹಣವನ್ನು ಯಾವುದೇ ರೀತಿಯ ತಕರಾರು ಇಲ್ಲದೆ ಇರುವಂಥ ಕಡೆ ನೀರಾವರಿ ಯೋಜನೆಗಳಿಗೆ ಬಿಡುಗಡೆ ಮಾಡಿ, ಆ ಕೆಲಸಗಳಿಗೆ, ಇವತ್ತು ಇದೇ ಒಂದು ಪ್ರತಿಷ್ಠೆಯನ್ನು ಅಲ್ಲಿ ತೋರಿಸಿದ್ದರೆ, ಒಳ್ಳೆಯದಾಗುತ್ತಿತ್ತು. ಇವತ್ತು ಉತ್ತರ ಕರ್ನಾಟಕದ ಹಲವಾರು ಭಾಗಗಳಲ್ಲಿ ನೀರಾವರಿಯನ್ನು ಸಾಧನೆ ಮಾಡುವುದಕ್ಕೆ ಏನೇನು ಅನುಕೂಲಗಳಿತ್ತು, ಅದರ ಕಡೆಗೆ ಗಮನ ಕೊಡದೇ ಇರತಕ್ಕಂಥಾದ್ದನ್ನು ನಾವು ಇಲ್ಲಿ ಕಾಣಬಹುದು. ನೀರಾವರಿ ವಿಷಯಕ್ಕೆ ಸಂಬಂಧಪಟ್ಟಂತೆ ಗಮನಕೊಡದೇ ಇರುವುದನ್ನು ನಾವಿಲ್ಲಿ ಕಾಣಬಹುದು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ.

ವಿದ್ಯುಚ್ಛಕ್ತಿಯ ವಿಷಯಕ್ಕೆ ಸಂಬಂಧಟ್ಟಂತೆ, ಹಿಂದಿನ ಸರ್ಕಾರಗಳು ಸರಿಯಾದ ರೀತಿಯಲ್ಲಿ ಗಮನ ಕೊಡದೇ ಇದ್ದುದರಿಂದ, ಇವತ್ತು ವಿದ್ಯುಚ್ಛಕ್ತಿಯ ಉತ್ಪಾದನೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳದೇ ಇದ್ದುದರಿಂದ, ಇವತ್ತು ಈ ರೀತಿಯ ಒಂದು ತೊಂದರೆಯನ್ನು ನಮ್ಮ ಸರ್ಕಾರ ಅನುಭವಿಸುತ್ತಿದೆ ಎನ್ನುವ ಮಾತನ್ನು ತಾವು

ಹೇಳುತ್ತಿದ್ದೀರಿ. ಸಮ್ಮಿಶ್ರ ಸರ್ಕಾರ ಆಡಳಿತ ನಡೆಸತಕ್ಕಂಥ ಸಂದರ್ಭದಲ್ಲಿ, ಇದೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಗಾರ್ಜುನ ಥರ್ಮಲ್ ಪ್ಲಾಂಟ್ ಆಗತಕ್ಕಂಥ ಸಂದರ್ಭದಲ್ಲಿ, ನಮ್ಮ ಗೃಹ ಸಚಿವರು ಅಂದು ಪ್ರತಿಯೊಂದು ಸಭೆಗೂ ಬಂದು ಕುಳಿತುಕೊಳ್ಳುತ್ತಿದ್ದರು. ಅಂದು ಎಷ್ಟು ವಿರೋಧಗಳಿದ್ದರೂ, ನೀವು ಮಾಡಲಿಲ್ಲ. ಆದರೆ, ಆ ಸಂದರ್ಭದಲ್ಲಿ ಆ ಭಾಗದಲ್ಲಿದ್ದಂಥ ಲೋಕಸಭಾ ಸದಸ್ಯರ ಜೊತೆಯಲ್ಲಿ ಹಲವಾರು ಜನ-ಅವರೀಗ ನಿಮ್ಮನ್ನು ಬಿಟ್ಟು ಹೋಗಿದ್ದಾರೆ, ಈ ಕಡೆಗೆ ಅವರನ್ನು ರವಾನೆ ಮಾಡಿದ್ದೀರಿ, ಆ ಸಂದರ್ಭದಲ್ಲಿ ಬಹಳ ವಿರೋಧ ವ್ಯಕ್ತಪಡಿಸಿದ್ದರು. ಆ ಯೋಜನೆಯನ್ನು ಅನುಷ್ಠಾನಕ್ಕೆ ತರಲು ನಾವು ಪ್ರಾಮಾಣಿಕವಾಗಿ ಆ ಸಂದರ್ಭದಲ್ಲಿ ಕೆಲಸವನ್ನು implement ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ. ನಾನು ಹಿಂದೆ ಸರಿಯತಕ್ಕಂಥ ಕೆಲಸಕ್ಕೆ ಹೋಗಲಿಲ್ಲ. ಆ ಸಂದರ್ಭದಲ್ಲಿ ಕಠಿಣವಾದ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಅದೇ ರೀತಿ ತದಡಿ ಯೋಜನೆಯನ್ನು ಮಾಡಬೇಕೆಂದು ಕೇಂದ್ರ ಸರ್ಕಾರದ ಮನವೊಲಿಸುವುದರಲ್ಲಿ ಅಲ್ಪಸ್ವಲ್ಪ ಮಟ್ಟಿನ ಯಶಸ್ಸನ್ನು ಕಂಡಿದ್ದೀರಿ. ಇವತ್ತು ಆ ಭಾಗದಲ್ಲಿ ಜನರ ವಿರೋಧವಿಲ್ಲದೇ ಹೋಗಿದ್ದರೆ, ಒಂದು Ultra Mega Project ಆವತ್ತು ತದಡಿಯಲ್ಲಿ ಪ್ರಾರಂಭವಾಗಬೇಕಾಗಿತ್ತು. ಅದು ನಿಧಾನವಾಗಿ ದ್ದು, ರಾಜ್ಯ ಸರ್ಕಾರದ ವತಿಯಿಂದ ತೆಗೆದುಕೊಂಡ ನಿರ್ಧಾರದಿಂದ ನಿಧಾನ ವಾಗಿ ದ್ದಲ್ಲ. ಅಲ್ಲಿಯ ಜನರ ವಿರೋಧ ಏನಿತ್ತು, ಆ ದೃಷ್ಟಿಯಿಂದ ಈಗಾಗಲೇ ಈ ಕಾರ್ಯಕ್ರಮ ಪ್ರಾರಂಭವಾಗುವುದಕ್ಕೆ ಏನು ಅವಕಾಶಗಳಿತ್ತು, ಆ ಭಾಗದ ಲೋಕಸಭಾ ಸದಸ್ಯರು ಮತ್ತು ಹಲವಾರು ಜನ ಮಠಾಧೀಶರುಗಳ ವಿರೋಧ ಏನು ಇತ್ತು, ಅದರಿಂದ ಆ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡುವುದಕ್ಕೆ ಹೋಗಲಿಲ್ಲ. ಸಮ್ಮಿಶ್ರ ಸರ್ಕಾರದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆಗೆ ಸಂಬಂಧಪಟ್ಟ ಹಾಗೆ, ಪ್ರಾಮಾಣಿಕವಾದ ಪ್ರಯತ್ನವನ್ನು ನಾವು ಪಟ್ಟಿದ್ದೀವೆ ಎನ್ನುವುದನ್ನು ಈ ಸಂದರ್ಭದಲ್ಲಿ ನಮ್ಮ ಸ್ನೇಹಿತರಾದ ಇಂಧನ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಮ್ಮ ಸಮ್ಮಿಶ್ರ ಸರ್ಕಾರ ಇದ್ದಾಗ, ಯಾವತ್ತೂ ಇಂಧನ ಇಲಾಖೆಯಲ್ಲಿ, ವಿದ್ಯುಚ್ಛಕ್ತಿಯ ಉತ್ಪಾದನೆಯ ವಿಷಯದಲ್ಲಿ ಯಾವುದೇ ಒಂದು ರೀತಿಯ ನಿಧಾನಗತಿಯ ತೀರ್ಮಾನಗಳನ್ನು ತೆಗೆದುಕೊಳ್ಳುವುದಕ್ಕೆ ಹೋಗಿಲ್ಲ. ಪ್ರತಿಯೊಂದು ಸಂದರ್ಭದಲ್ಲೂ ತಕ್ಷಣವೇ ಕ್ರಮವನ್ನು ತೆಗೆದುಕೊಂಡಿದ್ದೇವೆ ಎನ್ನುವುದನ್ನು ಗಮನಕ್ಕೆ ತರುತ್ತೇನೆ. ಇವತ್ತು ಏನು ಯೋಜನೆಗಳನ್ನು ತರತಕ್ಕಂಥಾದ್ದನ್ನು ಹೇಳುತ್ತಿದ್ದೀರಿ, ಇದಕ್ಕೆ ಹಣವನ್ನು ಯಾವರೀತಿ ತೊಡಗಿಸುತ್ತೀರಿ? ಈ ಕಾರ್ಯ ಕ್ರಮಗಳು ಬಹುಶಃ ನೀವು ತಿಳಿದಹಾಗೆ ಐದು ವರ್ಷಗಳಲ್ಲಿ ಮುಗಿಸುತ್ತೇವೆ ಎಂದು

ಹೇಳುತ್ತಿದ್ದೀರಿ, ಆದರೆ ಸರ್ಕಾರದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರತಕ್ಕಂಥಾದ್ದನ್ನು ನಾವು ನೋಡಿದಾಗ, ಐದು ವರ್ಷಗಳಲ್ಲಿ ಸಮಸ್ಯೆಗಳನ್ನು ಬಗೆಹರಿಸುತ್ತೇವೆ ಎಂದು ಹೇಳುತ್ತೀರಿ. ಆದರೆ ಅದು ಅಷ್ಟು ಸುಲಭವಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಸರ್ವಶಿಕ್ಷಣ ಅಭಿಯಾನ ಇವು ಕೇಂದ್ರ ಸರ್ಕಾರದ ಅನುದಾನದಲ್ಲಿ ಬರತಕ್ಕಂಥ ಕಾರ್ಯಕ್ರಮಗಳು, ಇದರ ಬಗ್ಗೆ ನಾನು ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ.

ಆರೋಗ್ಯಕ್ಕೆ ಸಂಬಂಧಪಟ್ಟ ಹಾಗೆ, ನೀವು ಏನು ಹಲವಾರು ಜಿಲ್ಲೆಗಳಲ್ಲಿ Dialysis ಕೇಂದ್ರಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದೀರಿ. Dialysis ಕೇಂದ್ರಗಳನ್ನು ಪ್ರಾರಂಭ ಮಾಡತಕ್ಕಂಥ ನಿರ್ಧಾರಗಳನ್ನು ಏನು ಮಾಡುತ್ತಿದ್ದೀರಿ, ಅಲ್ಲಿಗೆ ಸೇವೆಯನ್ನು ಕೊಡತಕ್ಕಂಥ ವೈದ್ಯಕೀಯ ಸಿಬ್ಬಂದಿಗಳನ್ನು ಆಯ್ಕೆ ಮಾಡುವುದಕ್ಕೆ, ಅಲ್ಲಿ ಕೆಲಸವನ್ನು ಮಾಡಿಸುವುದಕ್ಕೆ ಸಾಧ್ಯವಿದೆಯೇ? Dialysis ಕೇಂದ್ರಗಳನ್ನು ಸರ್ಕಾರದ ವತಿಯಿಂದ ಪ್ರಾರಂಭ ಮಾಡುತ್ತೇವೆ ಎಂದು ಹೇಳಬಹುದು. ಇವತ್ತಿನ ಪರಿಸ್ಥಿತಿಯಲ್ಲಿ ಹಲವಾರು ತಾಲ್ಲೂಕು ಕೇಂದ್ರಗಳಲ್ಲಿ, ಪ್ರಾಥಮಿಕ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆಯನ್ನು ಕಾಣುತ್ತಿದ್ದೇವೆ. Dialysis ಕೇಂದ್ರಗಳನ್ನು ಪ್ರಾರಂಭ ಮಾಡುತ್ತೇವೆ ಎನ್ನುವ ಕಾರ್ಯಕ್ರಮದಲ್ಲಿ, ವೈದ್ಯಕೀಯ ಸಿಬ್ಬಂದಿಯವರನ್ನು ಯಾವರೀತಿ ಆಯ್ಕೆ ಮಾಡುತ್ತೀರಿ? ಇವತ್ತು ಅವರು ನಿಮಗೆ ಸಿಗುತ್ತಾರೆಯೇ ಎನ್ನುವುದು ಮೂಲ ಪ್ರಶ್ನೆ. ಇವತ್ತು ನೀವು ಕಾರ್ಯಕ್ರಮ ತರುತ್ತಿರುವುದು ತುಂಬಾ ಒಳ್ಳೆಯ ಕಾರ್ಯಕ್ರಮ. ಆದರೆ ಕಾರ್ಯಕ್ರಮ ಕೇವಲ ಪುಸ್ತಕದಲ್ಲಿ ಉಳಿಯಬಾರದು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಪಡಿತರ ಚೀಟಿ ವಿಷಯಗಳನ್ನು ಹೇಳಿದ್ದೀರಿ. 78 ಲಕ್ಷ ಫಲಾನುಭವಿಗಳನ್ನು ಗುರುತಿಸಿದ್ದೇವೆ, ನೆಮ್ಮದಿ ಕೇಂದ್ರಗಳ ಮುಖಾಂತರ ಅರ್ಜಿ ಕೊಟ್ಟ ತಕ್ಷಣ ಕೊಡುತ್ತೇವೆ ಎಂದು ಹೇಳಿದ್ದೀರಿ. ಬಹುಶಃ ಇದರಲ್ಲಿ 100 ಕ್ಕೆ 100 ಯಶಸ್ವಿಯಾಗುತ್ತೀರಿ ಎನ್ನುವ ನಂಬಿಕೆ ನನಗೆ ಇಲ್ಲ. ನಾನು ನಿಮ್ಮಗಳ ಜೊತೆ ಸರ್ಕಾರ ನಡೆಸತಕ್ಕಂಥ ಸಂದರ್ಭದಲ್ಲಿ ಘಟನೆಗಳು ಏನೇನು ನಡೆಯಿತು, ಆ ಘಟನೆಗಳನ್ನು ನೋಡಿದಾಗ, ಬಹುಶ: ಈ ನೆಮ್ಮದಿಯ ಕೇಂದ್ರಗಳ ಮುಖಾಂತರ, ಮತ್ತೆ ಬಡ ಕುಟುಂಬಗಳು ಏನು ಇವೆ, ಇವತ್ತು ಪಡಿತರ ಚೀಟಿ ವ್ಯವಸ್ಥೆ ಇಲ್ಲದೇ ಇರತಕ್ಕಂಥವರು, ಅವರಿಗೆ ಮತ್ತೆ, affidavit ಅನ್ನು ಸಲ್ಲಿಸಿ ಎಂದು ಹೇಳಿ, ಮತ್ತೆ ಅವರ ಮೇಲೆ ದುಬಾರಿಯ ಹೊರೆಯನ್ನು ಏನು ಹೊರಿಸುತ್ತಿದ್ದೀರಿ, ಇದು ಸರಿಯಲ್ಲ. ಕಷ್ಟಪಟ್ಟು ಜೀವನ ಮಾಡತಕ್ಕಂಥ ಜನ ಏನಿದ್ದಾರೆ,

ಇವತ್ತು ಅವರು ಕೆಲಸಕ್ಕೆ ಎಂದು ಕ್ಯೂ ನಿಂತಿರುವುದನ್ನು ಟಿ.ವಿ.ಯಲ್ಲಿ ನಾವು ನೋಡಿದ್ದೇವೆ. ಜಾತ್ರೆಯ ರೀತಿಯಲ್ಲಿ ಜನರು ನಿಲ್ಲುತ್ತಿರುವುದನ್ನು ನೋಡಿದಾಗ, ನಿಜವಾದ ಬಡವರಿಗೆ ಪಡಿತರ ಚೀಟಿಯನ್ನು ಕೊಡತಕ್ಕಂಥದ್ದರಲ್ಲಿ, ನಾವು ನೀವು ಎಲ್ಲಾ ಸೇರಿ ಎಡವಿದ್ದೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಿಮ್ಮೊಬ್ಬರಿಗೇ ನಾನು ದೋಷ ಕೊಡುವುದಕ್ಕೆ ಹೋಗುವುದಿಲ್ಲ. ಈ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಬೇಕಾದರೆ, 2004ನೇ ಇಸವಿಯಲ್ಲಿ ಹೊಸ ರೀತಿಯ ಪದ್ಧತಿಯನ್ನು ತರುತ್ತೇವೆ ಎನ್ನುವ ಕೆಲಸಕ್ಕೆ ಕೈಹಾಕಿ, ಇಲ್ಲಿಯವರೆಗೆ, ಗೊಂದಲವನ್ನು ಸರಿಪಡಿಸುವುದಕ್ಕೆ ಆಗಲಿಲ್ಲ. ಈಗಲೂ ಸಹ ಅದು ಸರಿಯಾದ ರೀತಿಯಲ್ಲಿ ಆಗದೇ ಇದ್ದರೆ, ಜನ ಸ್ಪಂದನ ಕಾರ್ಯಕ್ರಮ ಪ್ರತಿ ವಾರ ಮಾಡುತ್ತಿದ್ದೀರಿ, ಆ ಜನಸ್ಪಂದನ ಕಾರ್ಯಕ್ರಮಕ್ಕೆ ಕೇವಲ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನ ಮತ್ತು ಪಡಿತರ ಚೀಟಿ, ಆಶ್ರಯ ಮನೆಗಳು, ಈ ವಿಷಯಗಳ ಬಗ್ಗೆ ಹೆಚ್ಚಿನ ಮನವಿಯನ್ನು ಸಲ್ಲಿಸುವುದಕ್ಕೆ ಜನ ಬರುತ್ತಾರೆ, ಇವತ್ತು ವೃದ್ಧಾಪ್ಯ ವೇತನ, ಅಂಗವಿಕಲರ ವೇತನ, ವಿಧವಾ ವೇತನ ಕೊಡತಕ್ಕಂಥದ್ದರಲ್ಲಿ ಸರ್ಕಾರ ಹೋಗುತ್ತಿರುವ ನಿಧಾನಗತಿ ಏನಿದೆ ಅದರಲ್ಲಿ ನಾವು ಹಲವಾರು ರೀತಿಯ ಲೋಪದೋಷಗಳನ್ನು ಕಾಣುತ್ತಿದ್ದೇವೆ ಎನ್ನುವುದನ್ನು ಹೇಳುವುದಕ್ಕೆ ಬಯಸುತ್ತೇನೆ. ಉದಾಹರಣೆಗೆ, ಈಗ ಹೊಸದಾಗಿ De-limitation ಆದ ನಂತರ, ವಿಧಾನಸಭಾ ಚುನಾವಣೆಗಳು ಏನು ನಡೆಯಿತು, ಕನಕಪುರ ಕ್ಷೇತ್ರದ ಎರಡು ಹೋಬಳಿಗಳು ನನ್ನ ಕ್ಷೇತ್ರಕ್ಕೆ ಬಂದಿವೆ, ಆ ಕ್ಷೇತ್ರದಲ್ಲಿ ಸುಮಾರು 25 ವರ್ಷಗಳ ಕಾಲ ಮಂತ್ರಿಯಾಗಿ ಕೆಲಸ ನಿರ್ವಹಿಸಿದ್ದಂಥವರೂ ಇದ್ದಾರೆ. ಇವತ್ತು ಹಳ್ಳಿಗಳಲ್ಲಿ ನಾನು ಗ್ರಾಮ ಸಂದರ್ಶನವನ್ನು ಮಾಡಿದಾಗ, ಪ್ರತಿ ಹಳ್ಳಿಯಲ್ಲಿ ಕನಿಷ್ಠ 100 ಜನ ವೃದ್ಧಾಪ್ಯ ವೇತನ ನಮಗೆ ಕೊಟ್ಟಿಲ್ಲ, ನಾವು ಈಗಾಗಲೇ 5-10 ಬಾರಿ ಅರ್ಜಿಯನ್ನು ಸಲ್ಲಿಸಿದ್ದೇವೆ, ನಮಗಿನ್ನೂ ವೃದ್ಧಾಪ್ಯ ವೇತನ ಬಂದಿಲ್ಲ ಎನ್ನುವ ಮಾತನ್ನು ಹೇಳುತ್ತಾರೆ. ಕಾರಣವೇನೆಂದರೆ, ತಾಲ್ಲೂಕು ಕಚೇರಿಗಳ ಮುಂದೆ ಕೆಲವು ಏಜೆಂಟರುಗಳಿದ್ದಾರೆ, ಅವರು ತಹಶೀಲ್ದಾರರುಗಳ ಜೊತೆ ಕುಳಿತು ಚರ್ಚೆ ಮಾಡಿ, ಅವರು ಯಾವ ಅರ್ಜಿಗಳನ್ನು ಕೊಡುತ್ತಾರೆ, ಆ ಅರ್ಜಿಗಳನ್ನು clear ಮಾಡುತ್ತಾರೆ. ನಿಜವಾದ ಫಲಾನುಭವಿಗಳಿಗೆ ಹಣ ದೊರಕುತ್ತಿಲ್ಲ ಎಂದು ಅವರು ಹೇಳುತ್ತಾರೆ. ಜನಸ್ಪಂದನ ಕಾರ್ಯಕ್ರಮ ಎಂದು ಏನು ಇಟ್ಟಿದ್ದೀರಿ, ಈ ಜನಸ್ಪಂದನ ಕಾರ್ಯಕ್ರಮದಲ್ಲಿ ಈಗಾಗಲೇ, 3,65,000 ಅರ್ಜಿಗಳನ್ನು ವಿಲೇವಾರಿ ಮಾಡಿದ್ದೇವೆ, ಎನ್ನುವ ಮಾತನ್ನು ಏನು ಹೇಳಿದ್ದೀರಿ, ಇದು ಅಷ್ಟು ಸುಲಭವಾಗಿರತಕ್ಕಂಥ ಕೆಲಸವಲ.

ಈ ವೃದ್ಧಾಪ್ಯ ವೇತನದಲ್ಲಿ ಮತ್ತು ಅಂಗವಿಕಲರ ವೇತನದ ಮಂಜೂರಾತಿಯಲ್ಲಿ ಹಲವಾರು ನ್ಯೂನ್ಯತೆಗಳಿವೆ. ನನಗೆ ಮೊನ್ನೆ ಯಾರೋ ಒಬ್ಬರು ಅಂಗವಿಕಲರು ಸುಮಾರು ರಾತ್ರಿ 12.30 ಅಥವಾ 1.00 ಗಂಟೆಗೆ ಫೋನ್ ಮಾಡಿದ್ದರು. ಈಗ ಹೊಸದಾಗಿ ನೀವು 1,000 ರೂಪಾಯಿಗಳನ್ನು, 75% ಅಂಗವಿಕಲತೆ ಇರತಕ್ಕಂಥವರಿಗೆ ಕೊಡಬೇಕೆಂದು ಏನು ನಿರ್ಧಾರ ಮಾಡಿದ್ದೀರಿ, ಅವರು ಇವತ್ತು ಡಾಕ್ಟರ್‌ಗಳ ಹತ್ತಿರ certificate ಕೇಳುವುದಕ್ಕೆ ಹೋದರೆ, ಡಾಕ್ಟರ್‌ಗಳು ದುರಹಂಕಾರದಿಂದ ನಮಗೆ certificate ಕೊಡದೇ, ನಮ್ಮನ್ನು ಆಚೆಗೆ ಕಳುಹಿಸುತ್ತಿದ್ದಾರೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಅದನ್ನು ನೋಡಿದರೆ, ನಿಮ್ಮ ಜನಸ್ಪಂದನ ಕಾರ್ಯಕ್ರಮ ಯಶಸ್ವಿಯಾಗಿದೆಯೇ ಎಂದು ಒಂದು ಬಾರಿ ತಾವು ಪರಿಶೀಲನೆ ಮಾಡಿ ನೋಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಇಲ್ಲಿ ರಾಜ್ಯಪಾಲರ ಮುಖಾಂತರ ಇಲ್ಲಿಯವರೆಗೆ 5,000 ಜನ ಅಂಗವಿಕಲರನ್ನು ಗುರುತಿಸಿದ್ದೇವೆ, 1000 ರೂಪಾಯಿಗಳನ್ನು ಕೊಡುತ್ತಿದ್ದೇವೆ ಎಂದು ಹೇಳಿದ್ದೀರಿ. ಅಲ್ಲಿಗೆ 75% ಅಂಗವಿಕಲತೆ ಇರತಕ್ಕಂಥವರು, ಈ ರಾಜ್ಯದಲ್ಲಿ ಕೇವಲ 5,000 ಜನವೇ? ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದು ಈಗಾಗಲೇ 7 ತಿಂಗಳುಗಳಾಗಿವೆ. ಕೇವಲ 5,000 ಜನ ಅಂಗವಿಕಲರನ್ನು ಗುರುತಿಸಕ್ಕಂಥ ಕೆಲಸವನ್ನು ಮಾಡಿದ್ದೀರಿ. ಆದರೆ, ಈ ರಾಜ್ಯದಲ್ಲಿ ಕನಿಷ್ಠ ಆ ರೀತಿಯ ನೋವಿನಲ್ಲಿರತಕ್ಕಂಥ ಜನ ಒಂದೂವರೆಯಿಂದ ಎರಡು ಲಕ್ಷದ ಮೇಲಿದ್ದಾರೆ, 75% ಅಂಗವಿಕಲತೆ ಇರತಕ್ಕಂಥವರು ಇದ್ದಾರೆ. ಆದಷ್ಟು ಬೇಗ ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕು ಎನ್ನುವ ಉದ್ದೇಶ ಏನಿಟ್ಟಿದ್ದೀರಿ, ನಿಜವಾದ ಫಲಾನುಭವಿಗಳು ಏನಿದ್ದಾರೆ, ಅವರಿಗೆ ಕೊಡತಕ್ಕಂಥ ಕೆಲಸ ಮಾಡಬೇಕು ಎಂದು ಮನವಿ ಮಾಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು ನಗರ ದಕ್ಷಿಣ) :- ಮಾನ್ಯ ಅಧ್ಯಕ್ಷರೆ, ಇದರಲ್ಲಿ 75% ಎಂದು ಇರುವುದನ್ನು 50% ಮಾಡುವುದಕ್ಕೆ ಪರಿಶೀಲನೆ ಮಾಡುವಂಥ ಅವಶ್ಯಕತೆ ಇದೆ. ಎರಡನೆಯದಾಗಿ, ಈ ರೀತಿಯ ಅಂಗವಿಕಲರಾದವರಿಗೆ ಮನೆಯಿಂದ ಹೊರಗೆ ಬರುವುದಕ್ಕೆ ಆಗುತ್ತಿಲ್ಲ. ಡಾಕ್ಟರ್ certificate ತೆಗೆದುಕೊಳ್ಳಬೇಕಾದರೆ, ಅವರನ್ನು DMO ಹತ್ತಿರ ಹೊತ್ತುಕೊಂಡು ಬರುವಂಥ ಸ್ಥಿತಿ ಇದೆ. ದಯವಿಟ್ಟು, ಇಂಥವರಿಗೆ ಸಹಕಾರ ಆಗುವಂಥ ನಿಟ್ಟಿನಲ್ಲಿ, ಮೊಬೈಲ್‌ನಲ್ಲಿ inspection ಮಾಡಿ, certificate ಕೊಡುವಂಥ ಏನಾದರೂ ಒಂದು ವ್ಯವಸ್ಥೆ ಮಾಡಿದರೆ ಮಾತ್ರ, ನಿಜವಾದ ಕಡು ಬಡವರಿಗೆ ಅವಕಾಶ ಸಿಗುತ್ತದೆ.

ಒಬ್ಬ ಮಾನ್ಯ ಸದಸ್ಯರು :- ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳು ಒಂದೂವರೆ ಸಾವಿರ, ಎರಡು ಸಾವಿರ ಲಂಚ ತೆಗೆದುಕೊಳ್ಳುತ್ತಿದ್ದಾರೆ. ದಯವಿಟ್ಟು, ವೃದ್ಧಾಪ್ಯ ವೇತನ ಹೀಗೆ ಹಲವಾರು ವಿಧಗಳಲ್ಲಿ ಲಂಚ ತೆಗೆದುಕೊಂಡ ಅಧಿಕಾರಿಗಳನ್ನು ಅರ್ಜೆಂಟಾಗಿ ಜೈಲಿಗೆ ಕಳುಹಿಸಿ.

ಶ್ರೀ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ) :- ಮಾನ್ಯ ಅಧ್ಯಕ್ಷರೆ, ಪೂರ್ತಿ ಬುದ್ಧಿಮಾಂದ್ಯ ಆಗಿದ್ದರೂ ಅಥವಾ ಬಲಗೈ ಇಲ್ಲವೆಂದರೂ ಕೂಡ ಅವರಿಗೆ certificate ಕೊಡುವುದಕ್ಕೆ ಡಾಕ್ಟರ್‌ಗಳು ಒಪ್ಪುತ್ತಿಲ್ಲ. ಅದಕ್ಕೆ ದಯಮಾಡಿ ಸರಿಯಾದ ನಿರ್ದೇಶನ ಕೊಡಬೇಕು, ನೀತಿ ನಿಯಮಗಳನ್ನು ಮಾಡಬೇಕು. ಅದಕ್ಕೆ ನಮಗೆ answer ಮಾಡುವುದಕ್ಕಾಗುತ್ತಿಲ್ಲ. ಅಂತಹ ಪರಿಸ್ಥಿತಿ ಆಗಿದೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರ ಸ್ವಾಮಿ (ರಾಮನಗರ) :- ಮಾನ್ಯ ಅಧ್ಯಕ್ಷರೆ, ನಾನು ಇನ್ನೊಂದು ಪ್ರಮುಖವಾದ ವಿಚಾರವನ್ನು ಹೇಳಬಯಸುತ್ತೇನೆ. ದಯವಿಟ್ಟು ಯಾರೂ ಅನ್ಯಥಾ ಭಾವಿಸಬಾರದು. ನಾನು ಇವತ್ತು ಈ ವಿಷಯವನ್ನು ಏಕೆ ಹೇಳುತ್ತಿದ್ದೇನೆಂದರೆ ನಮ್ಮ ಮುಖ್ಯಮಂತ್ರಿಗಳಿಗೆ ಒಂದು ವಿಶೇಷವಾದಂತಹ ವ್ಯಾಮೋಹವಿದೆ. ವ್ಯಾಮೋಹವಿದೆ ಎಂದು ಹೇಳುವುದಕ್ಕಿಂತ ಗೌರವ ಇದೆ ಎಂದು ಹೇಳುತ್ತೇನೆ. ಮಠಮಾನ್ಯಗಳಿಗೆ ಹಣವನ್ನು ಬಿಡುಗಡೆ ಮಾಡುವ ವಿಷಯದಲ್ಲಿ ಬಹಳ ವೇಗವಾಗಿ ನಿರ್ಧಾರ ಮಾಡುತ್ತಾರೆ. ಅವರ ನಿರ್ಧಾರವನ್ನು ನಾನು ತಪ್ಪು ಎಂದು ಹೇಳುವುದಿಲ್ಲ. ಅವರ ಗೌರವಕ್ಕೋಸ್ಕರ ಮಠಮಾನ್ಯಗಳ ಕಾರ್ಯಕ್ರಮಕ್ಕೆ ತಕ್ಷಣವೇ ನಾಳೆ ಬೆಳಿಗ್ಗೆಯೇ 1 ಕೋಟಿ 2 ಕೋಟಿ ಎಂದು ಘೋಷಣೆ ಮಾಡುತ್ತಾರೆ, ನನಗೆ ಅದರ ಬಗ್ಗೆ ತಕರಾರರು ಇಲ್ಲ. ಮೊನ್ನೆ ಕದಂಬೋತ್ಸವಕ್ಕೆ ಹೋದ ಸಂದರ್ಭದಲ್ಲಿ ಯಾವುದೋ ಮಠಾಧೀಶರ ಕಾರ್ಯಕ್ರಮಕ್ಕೆ ಹೋಗಿದ್ದೀರಿ. ಅಲ್ಲಿ ಮಠಾಧೀಶರು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಬಿರುದನ್ನು ಕೊಟ್ಟರು. ಆಗ ಮಾನ್ಯ ಮುಖ್ಯಮಂತ್ರಿಗಳು ಮುಂದಿನ ಬಜೆಟ್‌ನಲ್ಲಿ 2 ಕೋಟಿ ರೂಪಾಯಿ ಹಣವನ್ನು ನಿಮ್ಮ ಮಠಕ್ಕೆ ಕೊಡುತ್ತೇನೆಂದು ಕಾರ್ಯಕ್ರಮದಲ್ಲಿ ಘೋಷಣೆ ಮಾಡಿದರು. ನಾನು ಒಂದು ವಿಷಯವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನನಗಾಗಿರುವಂಥ ಅನುಭವಗಳ ಮುಖಾಂತರ, ಮಾನವೀಯ ದೃಷ್ಟಿಯಿಂದ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಬೇರೆ ಯಾವುದೇ ರೀತಿಯ

ಉದ್ದೇಶ ಇದರಲ್ಲಿ ಇಲ್ಲ. ಇವತ್ತು ನನ್ನ ಬಗ್ಗೆ ಕೆಲವರು ತಪ್ಪು ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಗ್ರಾಮ ವಾಸ್ತವ್ಯ ಕಾರ್ಯಕ್ರಮದ ಬಗ್ಗೆ ಲಘುವಾಗಿ ಮಾತನಾಡುತ್ತಾರೆ. ನಾನು ಮಾನ್ಯ ಗೋವಿಂದ ಕಾರಜೋಳ ಅವರ ಕ್ಷೇತ್ರವಾದ ಮುಧೋಳಿನಲ್ಲಿ ಎರಡು ಗ್ರಾಮ ವಾಸ್ತವ್ಯದ ಕಾರ್ಯಕ್ರಮ ಮಾಡಿದ್ದೇನೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದು ಇಷ್ಟೆ, ತಾವು ಮಠಾಧೀಶರಿಗೆ ಎಷ್ಟಾದರೂ ಹಣವನ್ನು ಕೊಡಿ, ನಾನು ಅದರ ಬಗ್ಗೆ ಯಾವುದೇ ಕಾರಣಕ್ಕೂ ಸಣ್ಣದಾಗಿ ಟೀಕೆ ಮಾಡುವುದಿಲ್ಲ. ಹಣವನ್ನು ಯಾವ ಉದ್ದೇಶಕ್ಕೆ ಕೊಡುತ್ತೀರಿ? ಮಠಾಧೀಶರ ಮುಖಾಂತರ ಮತ ಪಡೆಯಬೇಕೆನ್ನುವ ಉದ್ದೇಶದಿಂದ ತಾವು ಕಾರ್ಯಕ್ರಮಗಳಿಗೆ ಹಣವನ್ನು ಕೊಡುತ್ತೀರೆಂದು ನನಗೆ ಗೊತ್ತಿದೆ. ಅದರ ಬಗ್ಗೆ ನನಗೆ ತಕರಾರು ಇಲ್ಲ. ನಿಮ್ಮ ಸರ್ಕಾರದಲ್ಲಿ ಕಾರ್ಯಕ್ರಮಗಳಿಗೆ ಯಾವ ರೀತಿಯಾದರೂ ಹಣವನ್ನು ಕೊಡಲು ನಿಮಗೆ ಅಧಿಕಾರವಿದೆ. ಆದರೆ, ಮಠಾಧೀಶರಿಗೆ ವೇಗವಾಗಿ ಹಣವನ್ನು ಕೊಡುವಂತಹ ವ್ಯವಸ್ಥೆಯನ್ನು ರಾಜ್ಯದಲ್ಲಿ ಅನುಷ್ಠಾನಕ್ಕೆ ತಂದಿದ್ದೀರಿ. ನನಗಾಗಿರುವಂತಹ ಎರಡ್ಮೂರು ಅನುಭವಗಳನ್ನು ಸಭೆಯ ಮುಂದೆ ಇಡುತ್ತೇನೆ. ಧ್ವನಿ ಇಲ್ಲದಂತಹ ಜನರಿಗೆ ಏನಾದರೂ ಕಾರ್ಯಕ್ರಮವನ್ನು ಮುಂದಿನ ಬಜೆಟ್‌ನಲ್ಲಿ ಕೊಡಿ ಎಂದು ಮನವಿ ಮಾಡುತ್ತೇನೆ. ಉದಾಹರಣೆಗೆ ಕುಮಟ ಕ್ಷೇತ್ರದಲ್ಲಿ ನಾನು ಗ್ರಾಮ ವಾಸ್ತವ್ಯದ ಕಾರ್ಯಕ್ರಮ ಮಾಡಬೇಕಾದರೆ, ಬೆಳಗಿನ ಜಾವ ಎರಡೂವರೆ ಮೂರು ಗಂಟೆ ಇರಬಹುದು, ಒಂದು ಸಾಲಿನಲ್ಲಿ ಒಬ್ಬ ಹೆಣ್ಣು ಮಗಳು ಬರುತ್ತಾರೆ, ಅವರು ಬಂದು ನನ್ನ ಗಂಡನಿಗೆ ಲಕ್ವ ಹೊಡೆದಿದೆ, ನನ್ನ ಮಗ handicap, ನನಗೆ ಮನೆ ಇಲ್ಲ, ಊಟಕ್ಕೆ ಗತಿ ಇಲ್ಲ, ಏನಾದರೂ ಸಹಾಯ ಮಾಡಿ ಎಂದು ಮನವಿಯನ್ನು ಕೊಡುತ್ತಾರೆ. ಆಗ ನಾನು ಅವರಿಗೆ ವೃದ್ಧಾಪ್ಯ ವೇತನ ಬರುತ್ತಿಲ್ಲವೇ ಎಂದು ಕೇಳಿದಾಗ, ಅವರು ಇಲ್ಲ ನನಗೆ ಇನ್ನು 38-40 ವರ್ಷ ಎಂದು ಹೇಳಿದರು. ಅವರನ್ನು ನಾವು ದೈಹಿಕವಾಗಿ ಗಮನಿಸಿದರೆ, ಸುಮಾರು 65-70 ವಯಸ್ಸಿನವರ ತರಹ ಕಾಣಿಸುತ್ತಾರೆ. ನಾನು ಆ ದೃಷ್ಟಿಯಿಂದ ವೃದ್ಧಾಪ್ಯ ವೇತನ ಬರುತ್ತಿಲ್ಲವೇ ಎಂದು ಕೇಳಿದಾಗ, ನನಗೆ 38 ವರ್ಷ ಎಂದು ಆ ತಾಯಿ ಹೇಳುತ್ತಾರೆ. ನೀವು ಏನು ಕೆಲಸ ಮಾಡುತ್ತೀದ್ದೀರಿ, ನೀವು ಯಾವ ರೀತಿಯಾಗಿ ಕುಟುಂಬದಲ್ಲಿ ಜೀವನ ಮಾಡುತ್ತೀದ್ದೀರಿ ಎಂದು ಕೇಳಿದರೆ, ಯಾವುದೋ ಅಡುಗೆ ಕೆಲಸಕ್ಕೆ ಹೋಗುತ್ತೇನೆ, ಮದುವೆ ಮುಂಜಿಗಳಲ್ಲಿ ಅಡುಗೆ ಕೆಲಸ ಮಾಡುವವರ ಜೊತೆ ಹೋಗುತ್ತೇನೆ. ಅಲ್ಲಿ ಒಂದು ದಿವಸಕ್ಕೆ 20 ರೂಪಾಯಿ ಕೊಡುತ್ತಾರೆ. ಉಳಿದಿರುವಂತಹ ತರಕಾರಿ, ದಿನಸಿ ಪದಾರ್ಥಗಳನ್ನು contract

ತೆಗೆದುಕೊಂಡಿದ್ದವನು ಕೊಡುತ್ತಾನೆ, ಅದರಲ್ಲಿ ನಮ್ಮ ಕುಟುಂಬವನ್ನು ಸಾಕುತ್ತಿದ್ದೇನೆ. ಇಲ್ಲಿಯವರೆಗೆ ನಮಗೆ ಮನೆ ಇಲ್ಲ ಎಂದು ಹೇಳುತ್ತಾರೆ. ಈ ರೀತಿ ನಾನು ಏಕೆ ಉದಾಹರಣೆಯನ್ನು ಕೊಟ್ಟಿದ್ದೇನೆಂದರೆ, ಇದೇ ತರಹ ಲಕ್ಷಾಂತರ ಕುಟುಂಬಗಳು ರಾಜ್ಯದಲ್ಲಿವೆ. ಇವತ್ತು ಅಂತಹ ಕುಟುಂಬಗಳಿಗೆ ಆಶ್ರಯ ಮನೆಗಳ ವಿಷಯದಲ್ಲಿ ಸರ್ಕಾರ ಏನಾದರೂ ನಿಗದಿತ ಕಾರ್ಯಕ್ರಮವನ್ನು ಹಾಕಿಕೊಳ್ಳಲಿ. ಸಮ್ಮಿಶ್ರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ನಾನು ಅಧಿಕಾರಿಗಳಿಗೆ ಹೇಳಿದ್ದೆ, ಇವತ್ತು ನಿಮ್ಮ ಜೊತೆಗೂ ಚರ್ಚೆ ಮಾಡಿದ್ದೇನೆ. ಅದೇನೆಂದರೆ, ರಾಜ್ಯದಲ್ಲಿ ಕನಿಷ್ಠ 3-4 ವರ್ಷಗಳಲ್ಲಿ ಮನೆಗಳ ಸಮಸ್ಯೆಗೆ ಏನಾದರೂ ಪರಿಹಾರವನ್ನು ಕೊಡಬೇಕೆಂದು ವರ್ಷಕ್ಕೆ ಆರು ಲಕ್ಷ ಮನೆಗಳನ್ನು ಕಟ್ಟುವ ಗುರಿಯನ್ನು ಕೊಟ್ಟಿದ್ದೆ. ಆದರೆ, ಆ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಾಗಲಿಲ್ಲ. ಇವತ್ತು 1 ಲಕ್ಷ, 2 ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ಬಜೆಟ್‌ನಲ್ಲಿ ಹೇಳುತ್ತೇವೆ. ಆದರೆ, ನನಗೆ ಆದಂತಹ ಅನುಭವದಿಂದ ಅದನ್ನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ.

ನೀವು ನಿನ್ನೆ ದೇವದಾಸಿ ಕುಟುಂಬಕ್ಕೆ ಸಂಬಂಧಪಟ್ಟಂತೆ ಬಿಲ್ಲನ್ನು ಪಾಸ್ ಮಾಡಿದ್ದೀರಿ. ನನಗೆ ನಿಜಕ್ಕೂ ನೋವಾಗುತ್ತದೆ. ಮಾನ್ಯ ಗೋವಿಂದ ಕಾರಜೋಳ ಅವರ ಕ್ಷೇತ್ರವಾದ ಮುಧೋಳಿನಲ್ಲಿ ಗ್ರಾಮ ವಾಸ್ತವ್ಯ ಮಾಡಿದಾಗ, ದೇವದಾಸಿ ವೃತ್ತಿಯನ್ನು ಮಾಡುವಂತಹ ತಾಯಿಯ ಹೊಟ್ಟೆಯಲ್ಲಿ ಜನಿಸಿದ ಒಬ್ಬ ಹೆಣ್ಣು ಮಗಳು ಎಂ.ಎ ಪಧವೀದರಳಾಗಿರುತ್ತಾಳೆ. ಅವಳು ಯಾರೋ ವೀರಶೈವ ಸಮಾಜದ ಒಬ್ಬ ಹುಡಗನನ್ನೇ ಮದುವೆಯಾಗಿದ್ದಾಳೆ. ನನ್ನ ಮುಂದೆ ಬಂದು, ನನಗೆ ಯಾವುದೇ ರೀತಿಯ ಆಸರೆ ಇಲ್ಲ. ಏನಾದರೂ ಕೆಲಸ ಕೊಡಿಸಿ ಎನ್ನುವ ಮಾತನ್ನು ನನ್ನ ಮುಂದೆ ಹೇಳಿದಾಗ, ಆವತ್ತು ಸಾಯಂಕಾಲದೊಳಗೆ 25 ಸಾವಿರ ರೂಪಾಯಿಯನ್ನು, ಅಂತರ ಜಾತಿ ವಿವಾಹದಲ್ಲಿ ಏನೇನು ಅನುಕೂಲತೆಗಳನ್ನು ಕೊಡುತ್ತಾರೆ, ಅದನ್ನು ತಕ್ಷಣ ಬಿಡುಗಡೆ ಮಾಡಿಸಿ, ಆ ಹೆಣ್ಣು ಮಗಳು ಮತ್ತು ಅವಳ ಯಜಮಾನ ಇಬ್ಬರಿಗೂ ಬೆಂಗಳೂರಿಗೆ ಬಂದು ನನ್ನನ್ನು ಭೇಟಿ ಮಾಡಿ ಎಂದು ಹೇಳಿದ್ದೆ. ನನ್ನ ಮುಖ್ಯಮಂತ್ರಿ ಕಛೇರಿಯೊಳಗೆ ಅವರಿಬ್ಬರಿಗೂ ಕೆಲಸವನ್ನು ಕೊಟ್ಟೆ.. ಎಂ.ಎ ಪದವಿಯನ್ನು ಆ ದೇವದಾಸಿ ಕುಟುಂಬದಿಂದ ಬಂದ ಹೆಣ್ಣುಮಗಳು ಓದಿದ್ದಾಳೆ. ಆವತ್ತು ನನ್ನ ಕಛೇರಿಯಲ್ಲಿ ಏನು ಕೆಲಸವನ್ನು ಮಾಡುತ್ತಿದ್ದಳು ಆ ಹೆಣ್ಣುಮಗಳನ್ನು ಇವತ್ತು ನೀವು ಹೊರಗಡೆ ಹಾಕಿದ್ದೀರಿ. ಅಂಥ ಹೆಣ್ಣು ಮಗಳ ಬಗ್ಗೆ ಗಮನಹರಿಸದೇ ಇದ್ದ ಮೇಲೆ ಯಾವ ಪುರುಷಾರ್ಥಕ್ಕೆ ನೀವು ಇವತ್ತು ದೇವದಾಸಿ ಬಿಲ್ಲನ್ನು ತಂದಿದ್ದೀರಿ.? ನೀವು

Bill ಗಳನ್ನು introduce ಮಾಡುವುದರಿಂದ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ. ದಯವಿಟ್ಟು ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ಇವತ್ತು ನೀವು ಮಠಾಧೀಶರಿಗೆ ಯಾವ ರೀತಿಯಾಗಿ ವೇಗವಾಗಿ ಹಣವನ್ನು ಬಿಡುಗಡೆ ಮಾಡುತ್ತೀರಿ, ಅದೇ ರೀತಿ ಧ್ವನಿ ಇಲ್ಲದೇ ಇರುವವರಿಗೆ ಗೌರವಾನ್ವಿತವಾಗಿ ಬಾಳಲು ಒಂದು ಆರ್ಥಿಕ ಕಾರ್ಯಕ್ರಮವನ್ನು ಮುಂದಿನ ಬಜೆಟ್‌ನಲ್ಲಿ ರೂಪಿಸಲು ಗಮನ ಕೊಡಬೇಕೆಂಬ ಮನವಿಯನ್ನು ಅಧ್ಯಕ್ಷರ ಮುಖಾಂತರ ಮಾಡಲು ಬಯಸುತ್ತಿದ್ದೇನೆ.

ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಹಾಗೆ, ಹಣ ಬಿಡುಗಡೆ ಮಾಡಿಕೊಂಡಿರುವ ಬಗ್ಗೆ ಚರ್ಚೆ ಮಾಡಲು ಹೋಗುವುದಿಲ್ಲ. ಕೈಗಾರಿಕೆಗಳ ಬಗ್ಗೆ ತಾವು ಹೇಳುತ್ತೀರಿ. ಇವತ್ತು ನಮ್ಮ ಕೈಗಾರಿಕಾ ಸಚಿವರು ಇಲ್ಲಿ ಇಲ್ಲ. ಅವರು ಒಂದು ಹೇಳಿಕೆ ಕೊಟ್ಟಿರುವುದನ್ನು ನಾನು ನೋಡಿದ್ದೇನೆ. ಅದೇನೆಂದರೆ, ಮುಂದಿನ ಜನವರಿ 15 ನೇ ತಾರೀಖಿನೊಳಗೆ 2 ಲಕ್ಷ ಕೋಟಿ ಕೈಗಾರಿಕೆಯನ್ನು ಪ್ರಾರಂಭ ಮಾಡುವಂತಹ ಉದ್ದಿಮೆಗಳು ಅಮೆರಿಕಾದಿಂದ ಬರುತ್ತಿವೆ ಎಂದು ಅಮೆರಿಕಾ ಪ್ರವಾಸ ಮುಗಿಸಿ ಬಂದ ತಕ್ಷಣವೇ ಕೈಗಾರಿಕಾ ಸಚಿವರು ಕೊಟ್ಟಂಥ ಹೇಳಿಕೆಯನ್ನು ನಾನು ನೋಡಿದ್ದೆ. ಆ paper cutting ಇಲ್ಲಿದೆ ಅದನ್ನು ಓದುವುದಕ್ಕೆ ಹೋಗುವುದಿಲ್ಲ. ಈಗಾಗಲೇ ನಾವು ಜನವರಿ 24ರಲ್ಲಿದ್ದೇವೆ. ಜಾಗತಿಕ ಮಟ್ಟದಲ್ಲಿ ಆರ್ಥಿಕ ವ್ಯವಸ್ಥೆಯ ಕುಸಿತದಿಂದ ಕೆಲಸ ಆಗಿಲ್ಲವೆಂದು ಕಾಣುತ್ತದೆ. ನಾನು ಅದರ ಬಗ್ಗೆ ಲಘುವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. 36 ಸಾವಿರ ಕೋಟಿ ರೂ.ಬಂಡವಾಳ ಹೂಡುತ್ತಾರೆ, 5 ಲಕ್ಷ ಉದ್ಯೋಗ ಕೊಡುತ್ತಾರೆಂದು ತಾವು ಹೇಳಿದ್ದೀರಿ. ಇವೆಲ್ಲಾ ಒಂದು ರೀತಿಯಲ್ಲಿ ನಮ್ಮ ಕನಸಿನ ಗೋಪುರಗಳು. ನಾವು ನಮ್ಮ ಕಾಲದಲ್ಲಿ ನಾವಿಬ್ಬರೂ ಸೇರಿ ಹಲವಾರು ಸಲ HLC ಮೀಟಿಂಗ್ ಮಾಡಿ ಹಲವಾರು ಕೈಗಾರಿಕೆಗಳಿಗೆ ಒಪ್ಪಿಗೆ ಕೊಟ್ಟಿದ್ದೇವೆ. ಅದರಲ್ಲಿ ಎಷ್ಟು ಕಾರ್ಖಾನೆಗಳು ಬಂದವು, ಎಷ್ಟು ಜನ industries ತೆರೆದಿದ್ದಾರೋ ಗೊತ್ತಿಲ್ಲ. 5 ಲಕ್ಷ ಜನರಿಗೆ ಉದ್ಯೋಗವನ್ನು ಕೊಡುತ್ತೇವೆಂದು ಹೇಳುವುದು ನನಗೆ ತಿಳಿದ ಮಟ್ಟಿಗೆ ಅವೆಲ್ಲಾ ಆಗದೇ ಇರುವಂಥ ಕಾರ್ಯಕ್ರಮಗಳು. ಬಜೆಟ್‌ನಲ್ಲಿ ಸಿದ್ಧ ಉಡುಪು ತಯಾರು ಮಾಡುವಂತಹ ಜವಳಿ ಉದ್ಯಮಕ್ಕೆ 500 ಕೋಟಿ ರೂಪಾಯಿ ಮೀಸಲಿಟ್ಟು ಮುಂದಿನ 5 ವರ್ಷಕ್ಕೆ ಈ ಹಣವನ್ನು ಖರ್ಚು ಮಾಡುತ್ತೇವೆಂದು ಮೊನ್ನೆ repeat ಮಾಡಿದ್ದೀರಿ. ನೀವೇ ಕಳೆದ ಬಜೆಟ್‌ನಲ್ಲಿ ಅಂದರೆ 2007-08ರಲ್ಲಿ ಆರ್ಥಿಕ ಸಚಿವರಾಗಿ, ಪ್ರತಿ ವರ್ಷ 100 ಕೋಟಿ ರೂಪಾಯಿಗಳನ್ನು ಖರ್ಚುಮಾಡುವುದರ ಮೂಲಕ ಜವಳಿ textile park

ಗಳಿಗೆ ಉತ್ತೇಜನ ಕೊಡುತ್ತೇವೆಂದು ಘೋಷಣೆ ಮಾಡಿದ್ದೀರಿ. ಕಳೆದ ಬಜೆಟ್‌ನಲ್ಲಿ 500 ಕೋಟಿ ರೂ.ಗಳನ್ನು ಘೋಷಣೆ ಮಾಡಲಾಗಿತ್ತು. ಕಳೆದ ವರ್ಷವೇ 100 ಕೋಟಿ.ರೂ.ಗಳನ್ನು ಇಡಲಾಗಿತ್ತು. ಇದನ್ನು ಇಟ್ಟಿದ್ದು 2007-2008ನೇ ಸಾಲಿಗೆ. 2008-09ನೇ ಸಾಲಿನಲ್ಲಿ ರಾಜ್ಯಪಾಲರ ಭಾಷಣದಲ್ಲಿ 25 ಕೋಟಿ ರೂಪಾಯಿ ಕ್ರಿಯಾ ಯೋಜನೆ ಈಗ ಸಿದ್ಧಪಡಿಸಲಾಗಿದೆ ಎಂದು ಹೇಳುತ್ತಿದ್ದೀರಿ. ಇದು ಸರ್ಕಾರ ತೆಗೆದುಕೊಂಡಿರುವಂತಹ ಕಾರ್ಯಕ್ರಮಗಳು ಯಾವ ರೀತಿ ತುಂಬಾ ನಿಧಾನ ಗತಿಯಲ್ಲಿ ನಡೆಯುತ್ತಿದೆ ಎಂದು ನಾನು ಸದನದ ಗಮನವನ್ನು ಸೆಳೆಯಲು ಬಯಸುತ್ತೇನೆ.

ಬೆಂಗಳೂರು ಅಭಿವೃದ್ಧಿ ವಿಷಯದಲ್ಲಿ, ಬೆಂಗಳೂರು ಮತ್ತು ಸುತ್ತಮುತ್ತ ಕ್ಷೇತ್ರದಿಂದ ಆಯ್ಕೆಯಾಗಿರುವ ಬಿ.ಜೆ.ಪಿ ಶಾಸಕ ಮಿತ್ರರು ಅರ್ಥ ಮಾಡಿಕೊಳ್ಳ ಬೇಕಾಗುತ್ತದೆ. ಮಾನ್ಯ ಅಶೋಕ್ ಅವರು ನನ್ನ ಜೊತೆ ಇದ್ದರು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾಡುವಂತಹ ನಿರ್ಧಾರ ಆ ಸಂದರ್ಭದಲ್ಲಿ ನಾವು ವೇಗವಾಗಿ ತೀರ್ಮಾನ ಮಾಡಿದ್ದರಿಂದ ಇವತ್ತು 623 ಕೋಟಿ ರೂಪಾಯಿ ಹೊರ ವಲಯದಲ್ಲಿ ಬಿ.ಡಿ.ಎ ವತಿಯಿಂದ ನೀವು ಹಣವನ್ನು ಖರ್ಚು ಮಾಡುತ್ತಿದ್ದೀರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಸಮ್ಮಿಶ್ರ ಸರ್ಕಾರ ಇದ್ದಂಥ ಸಂದರ್ಭದಲ್ಲಿ ನಾವು ಜಾರಿಗೆ ತಂದ ಕಾರ್ಯಕ್ರಮದ ಮುಖಾಂತರ ಇವತ್ತು 17 ಜನ ಶಾಸಕರು ಸ್ವಲ್ಪ face saving ಮಾಡಿಕೊಳ್ಳಲು ಅನುಕೂಲವಾಗಿದೆ ಎನ್ನುವ ಮಾತನ್ನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ಏಕೆಂದರೆ, ಹಲವಾರು ಕಾರ್ಯಕ್ರಮಗಳನ್ನು ನೀವು ಘೋಷಣೆ ಮಾಡಿದ್ದೀರಿ. ನೀವು ಮಾಡಿರುವಂತಹ ಘೋಷಣೆಗಳೆಲ್ಲಾ ನಾನು ನೀವು ಇಬ್ಬರೂ ಸೇರಿ ಮೀಟಿಂಗ್ ಮಾಡಿ ತೆಗೆದುಕೊಂಡಂತಹ ನಿರ್ಧಾರಗಳು, ಈಗ ನಿಮ್ಮ ಸರ್ಕಾರದಲ್ಲಿ ಆ ಘೋಷಣೆಗಳು implement ಆಗುತ್ತಿವೆ. Implement ಆಗುವುದಕ್ಕೆ ಎರಡು ವರ್ಷಗಳು ಬೇಕಾಯಿತು. ಈಗ ಎಲ್ಲಾ ಕೆಲಸಗಳು ಪ್ರಾರಂಭವಾಗುತ್ತಿವೆ. ಅದು ನಮ್ಮ ಕಾಲದಲ್ಲಾಗುತ್ತಿವೆ ಎಂದು ನೀವು ಒಂದು certificate ತೆಗೆದುಕೊಳ್ಳುವುದಕ್ಕೆ ಹೊರಟಿದ್ದೀರಿ. ಭಗವಂತ ನಿಮಗೆ ಒಳ್ಳೆಯದು ಮಾಡಲಿ. ಚೆನ್ನಾಗಿರಿ.

ಅದರ ಜೊತೆಗೆ, ಕೃಷಿ ಇಲಾಖೆಗೆ ಸಂಬಂಧಿಸಿದಂತೆ ನಾನು ಮನವಿ ಮಾಡುವುದೇನೆಂದರೆ, ಕೆಲವು ವಿಷಯಗಳನ್ನು ಪ್ರಸ್ತಾಪಿಸಲಿಲ್ಲ. ಇವತ್ತು ಕೊಪ್ಪಳ ಜಿಲ್ಲೆ ದಾಳಿಂಬೆ ಬೆಳೆಯುವ ಉತ್ತಮ ವಾತಾವರಣ ಇರುವ ಜಿಲ್ಲೆಯಾಗಿದೆ. ವಿದೇಶಿ

ಮಾರುಕಟ್ಟೆ ಇರುವ ಆ ಜಿಲ್ಲೆಯಲ್ಲಿ ದಾಳಿಂಬೆ ಬೆಳೆ ಬೆಳೆಯುವ ರೈತರ ಹೊಲದಲ್ಲಿ ದಾಳಿಂಬೆ ಬೆಳೆ ರೋಗಕ್ಕೆ ತುತ್ತಾಗಿದೆ. ಕೇಂದ್ರ ಸರ್ಕಾರವು ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು ಮತ್ತು ಆಂಧ್ರಪ್ರದೇಶಕ್ಕೆ ವಿಶೇಷ ಪ್ಯಾಕೇಜ್‌ಗಳನ್ನು ಘೋಷಿಸಿದೆ. ನಮ್ಮ ಸರ್ಕಾರ ಅದಕ್ಕೆ Matching Grant ಕೊಡಬೇಕು. Matching Grant ಕೊಡದೇ ಇದ್ದರೆ, ಹಣ ನಿಮಗೆ ಬರುವುದಿಲ್ಲ.

ಇವತ್ತು ಉತ್ತರ ಕರ್ನಾಟಕದ ಬಗ್ಗೆ ಇಷ್ಟೊಂದು ಚರ್ಚೆಯಾಗುತ್ತಿದ್ದು, ಯಾವ ರೈತರ ಬಗ್ಗೆ ನೀವು ಇಷ್ಟು ಚರ್ಚೆ ಮಾಡುತ್ತಿದ್ದೀರಿ, ರೈತನ ಮಗ ಎಂದು ಹೇಳುತ್ತಿದ್ದೀರಿ, ಈ ಕಾರ್ಯಕ್ರಮದತ್ತ ನೀವು ಇನ್ನೂ ಗಮನಹರಿಸಲಿಲ್ಲ. ಕೇಂದ್ರ ಸರ್ಕಾರವು National Horticulture Missionನಡಿ ವಿಶೇಷ ಪ್ಯಾಕೇಜ್ ಒದಗಿಸಿಕೊಟ್ಟಿದೆ. ವಿಶೇಷ ಪ್ಯಾಕೇಜ್ ಒದಗಿಸಿಕೊಡುವ ಸಂಬಂಧ ಕೇಂದ್ರ ಸರ್ಕಾರವು ನಾಲ್ಕು ರಾಜ್ಯಗಳನ್ನು ಆಯ್ಕೆ ಮಾಡಿದೆ. ಆ matching grant ಕೊಡುವುದಕ್ಕೆ ಸರ್ಕಾರ ಇನ್ನೂ ಗಮನಹರಿಸಿಲ್ಲ. ಆದಷ್ಟು ತಕ್ಷಣ ಆ ಕಾರ್ಯಕ್ರಮದತ್ತ ತಾವು ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ಸದನದ ಗಮನ ಸೆಳೆಯಬಯಸುತ್ತೇನೆ.

ಇನ್ನು 500 ಕೋಟಿ ರೂ. ಆವರ್ತನ ನಿಧಿ ಇಟ್ಟಿದ್ದೇವೆಂದು ಹೇಳುತ್ತಿದ್ದೀರಿ. ಯಾವ ಪುರುಷಾರ್ಥಕ್ಕೆ ಇಟ್ಟಿದ್ದೀರಿ? ಇವತ್ತು ಯಾವುದೇ ರೈತರ ಸಂಕಷ್ಟಕ್ಕೆ ನೀವೇನಾದರೂ interfere ಆಗಿದ್ದೀರಾ? ಕಬ್ಬು ಬೆಳೆಗಾರರು ಕಳೆದ 7 ತಿಂಗಳಿನಿಂದಲೂ, ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪ್ರತಿನಿತ್ಯವೂ ನಿಮ್ಮ ಮುಂದೆ ಬಂದು ಮನವಿಗಳನ್ನು ಸಲ್ಲಿಸುತ್ತಲೇ ಇದ್ದಾರೆ. ನೀವೂ ಹಲವಾರು ರೀತಿಯ ಭರವಸೆಗಳನ್ನು ಕೊಡುತ್ತಲೇ ಇದ್ದೀರಿ. ನಿನ್ನೆ ಸಕ್ಕರೆ ಸಚಿವರು ಒಂದು ಭರವಸೆ ಕೊಟ್ಟಿದ್ದಾರೆ. ***"ಬೆಳೆಗಾರರಿಗೆ ಸಿಹಿಯಾಗದ ಕಬ್ಬು -ಸಕ್ಕರೆ ಕಾರ್ಖಾನೆ ಮಾಲೀಕರಿಗೆ ಮುಖ್ಯಮಂತ್ರಿಗಳ ಎಚ್ಚರಿಕೆ"*** ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಕೊನೆಗೆ, ವಿರೋಧ ಪಕ್ಷದ ನಾಯಕರು ಏನೋ ಒಂದು ಮಾತನ್ನು ಹೇಳಿದರು. ಕನಿಮ್ಮ ದಾರಿ ನಿಮಗೆ ಅವರ ದಾರಿ ಅವರಿಗೆಕಿ ಎನ್ನುವಂತಹ ಏನೋ ಒಂದು ಮಾತನ್ನು ಹೇಳಿದರು. ಮುಖ್ಯಮಂತ್ರಿಗಳು ದಿನಾಂಕ 15.7.2008ರಲ್ಲಿ ಕಬ್ಬು ಬೆಳೆಗಾರರ ಒಂದು ಸಭೆ ನಡೆಸುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಇಷ್ಟೆಲ್ಲಾ ಹೇಳುವುದನ್ನು ಹೇಳುತ್ತೇವೆ. ಅನ್ಯಾಯ ಆಗಿದ್ದನ್ನು ಅವರ ಗಮನಕ್ಕೆ ತಂದಿದ್ದೇವೆ. ಅನ್ಯಾಯವನ್ನು ಗಮನಕ್ಕೆ ತಂದ ನಂತರ ಅದನ್ನು ಸರಿಪಡಿಸದೇ ಹೋದರೆ ಅದಕ್ಕೆ ಏನು ಮಾಡಬೇಕು? ಅವರ ದಾರಿ ಅವರಿಗೆ ನಮ್ಮ ದಾರಿ ನಮಗೆ ಎಂದು ಹೇಳಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನಾನು ಏಕೆ ಹೇಳುತ್ತೇನೆಂದರೆ, ಮುಖ್ಯಮಂತ್ರಿಗಳು ಕಬ್ಬು ಬೆಳೆಗಾರರ ಮತ್ತು ಸಕ್ಕರೆ ಕಾರ್ಖಾನೆಗಳ ಮಾಲೀಕರ ಸಭೆ ಕರೆಯುತ್ತಾರೆ. "ನಿಮಗೆ ಸಹಕಾರ ನೀಡಲು ಸರ್ಕಾರ ಸಿದ್ಧವಿದೆ. ಪ್ರತಿಯಾಗಿ ನಿಮ್ಮಿಂದಲೂ ಅದನ್ನು ಬಯಸುತ್ತೇನೆ. ನೀವು ಸಹಕರಿಸದಿದ್ದರೆ, ನಿಮ್ಮ ದಾರಿ ನಿಮಗೆ ನಮ್ಮ ದಾರಿ ನಮಗೆ" ಎಂದು ಸಕ್ಕರೆ ಕಾರ್ಖಾನೆ ಮಾಲೀಕರಿಗೆ ಹೇಳಿ ಸಭೆಯಿಂದ ಎದ್ದು ಬರುತ್ತಾರೆ. ಮುಖ್ಯಮಂತ್ರಿಗಳೇ ಆ ರೀತಿ ಹೇಳಿ ಸಭೆಯಿಂದ ಎದ್ದು ಬಂದರೆ ಹೇಗೆ? ಸಂಕಷ್ಟಕ್ಕೊಳಗಾಗಿರುವ ಕಬ್ಬು ಬೆಳೆಗಾರರೇನಿದ್ದಾರೆ, ಅವರ ಬಗ್ಗೆ ಗಮನಹರಿಸಬೇಕು. ಬಿಜಾಪುರ ಜಿಲ್ಲೆಯ ರೈತರಿಗೆ ಕಳೆದ ಎರಡು ವರ್ಷಗಳಿಂದ ನಮ್ಮ ಸಮ್ಮಿಶ್ರ ಸರ್ಕಾರ ಇದ್ದಾಗ ಕಬ್ಬು ಬೆಳೆದ ರೈತರು ಕಟಾವು ಮಾಡಿ ಸಕ್ಕರೆ ಕಾರ್ಖಾನೆಗೆ ತೆಗೆದುಕೊಂಡು ಹೋಗುವುದಕ್ಕಾಗದೆ ಕಬ್ಬು ಹೊಲದಲ್ಲಿಯೇ ಒಣಗಿ ನಿಂತಿದ್ದರಿಂದ ರೈತರಿಗೆ ಹೆಕ್ಟೇರ್‌ಗೆ 25,000 ರೂ. ಹಣ ಕೊಡಬೇಕೆಂದು ನಿರ್ಧರಿಸಿ ಹಣ ಬಿಡುಗಡೆ ಮಾಡಿದೆವು. ಆದರೆ, ಬಿಜಾಪುರ ಜಿಲ್ಲೆಯಲ್ಲಿ ಅಧಿಕಾರಿಗಳು ತೆಗೆದುಕೊಂಡ ನಿರ್ಧಾರದಿಂದ ಇಲ್ಲಿಯವರೆಗೂ ರೈತರಿಗೆ ಹಣ ಬಿಡುಗಡೆಯಾಗಲಿಲ್ಲ.

"ನಮ್ಮ ಸರ್ಕಾರ ಬಂದರೆ 24 ಗಂಟೆಯೊಳಗೆ ನಿಮ್ಮ ಹಣ ಬಿಡುಗಡೆ ಮಾಡುತ್ತೇವೆ" ಎಂದು ಮುಖ್ಯಮಂತ್ರಿಗಳು ಚುನಾವಣೆ ಸಂದರ್ಭದ ಬಹಿರಂಗ ಸಭೆಯಲ್ಲಿ ಮಾತು ಕೊಟ್ಟು ಬರುತ್ತಾರೆ. ಆದರೆ, 7 ತಿಂಗಳುಗಳಾಯಿತು. ಇವತ್ತಿನವರೆಗೂ ಕಬ್ಬು ಬೆಳೆದ ಬೆಳೆಗಾರರಿಗೆ, ರೈತರಿಗೆ ಹಣ ತಲುಪಿಸಲಿಲ್ಲ. ಇದು ಸರ್ಕಾರದಿಂದ ನಡೆಯುತ್ತಿರುವ ರೀತಿಗಳೆಂದು ನಿಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇವತ್ತು 160 ರೂ.ಗಳನ್ನು ಟನ್‌ವೊಂದಕ್ಕೆ ಕೊಡುವುದು ಮತ್ತು ಯಾವುದೇ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿ ಈ ಸರ್ಕಾರ ಇಲ್ಲಿಯವರೆಗೂ ಗಮನಕೊಡಲಿಲ್ಲ. ಯಾವುದೋ ಒಂದು ಪತ್ರಿಕೆಯಲ್ಲಿ "ಕಬ್ಬು ಸಭೆಯಿಂದ ಸಿಕ್ಕಿದ್ದು ಬರೀ ಸಿಪ್ಪೆ" ಎಂದು ಬರೆಯುತ್ತಾರೆ. ಯಾವ ರೈತರ ಸರ್ಕಾರವೆಂದು ಹೇಳುತ್ತಾರೆ, ಇವೆಲ್ಲವೂ ನಿಮ್ಮ ಕಾರ್ಯಕ್ರಮಗಳೆಂದು ಹೇಳಬಯಸುತ್ತೇನೆ.

ಮಾನ್ಯ ಹಿರಿಯ ಸದಸ್ಯರಾದ ಶ್ರೀ ಟಿ.ಬಿ.ಜಯಚಂದ್ರರವರು ಮಾತನಾಡುತ್ತಾ, ನೆಲಗಡಲೆ ಬೆಳೆದ ಚಿತ್ರದುರ್ಗ, ತುಮಕೂರು ಜಿಲ್ಲೆಗಳ ಭಾಗದ ರೈತರು ಬೆಳೆ ನಷ್ಟವಾಗಿ ಸಂಕಷ್ಟಕ್ಕೊಳಗಾದರು ಎಂದು ಹೇಳಿದರು. ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆ ಬೆಳೆದ ರೈತರ ಸಂಕಷ್ಟಕ್ಕೆ ಇವತ್ತು ಈ ಸರ್ಕಾರ ಬರಲಿಲ್ಲ ಎಂದರು. ಬೆಲೆ ಕುಸಿತಗೊಂಡಾಗಲೂ ಈ ಸರ್ಕಾರ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಬದಲಾಗಿ, 100, 200 ದಿವಸಗಳ ಸಾಧನೆ ಎಂದು ಪುಸ್ತಕಗಳ ಮುಖಾಂತರ ಪ್ರಗತಿಯ ಬಗ್ಗೆ ಕಾರ್ಯಕ್ರಮ ಘೋಷಿಸುವುದಕ್ಕೆ ಏನು ಹೊರಟಿದ್ದೀರಿ, ಅದರಿಂದ ಮುಂದೆ 25 ಸ್ಥಾನಗಳಲ್ಲಿ ಗೆಲ್ಲುತ್ತೇವೆಂಬ ದೊಡ್ಡ ಮಟ್ಟದ ಆಶಾಭಾವನೆ ಇದೆ. ನೋಡೋಣ. ಅದರ ಜೊತೆಗೆ, ಉಪ ಚುನಾವಣೆಯಲ್ಲಿ ಪ್ರಸ್ತಾಪಿಸಿದ್ದಾರೆ. ನಾನು ಮನವಿ ಮಾಡುತ್ತೇನೆ. ಯಾವ ಎಂಟು ವಿಧಾನಸಭಾ ಉಪ ಚುನಾವಣೆಯಲ್ಲಿ ನೀವು 30 ಕೋಟಿ, 40 ಕೋಟಿ ರೂ. ಎಂದು ಏನು ಹಣ ಬಿಡುಗಡೆ ಮಾಡಿದ್ದೀರಿ, ನಾವ್ಯಾರೂ ನಿಮಗೆ ಪೀಸ್ ವರ್ಕ ಕೊಡಿ ಎಂದು ಕೇಳಿಲ್ಲ. ಪೀಸ್ ವರ್ಕ್ ಕೊಟ್ಟವರೇ ನೀವು. ಯಾವ ಅಭ್ಯರ್ಥಿಗಳಿದ್ದರೋ, ಆ ಅಭ್ಯರ್ಥಿಗಳಿಗೆ ಕೊಟ್ಟ ಲೆಟರ್ ಹೆಡ್ಸ್ ಮೇಲೆ ನೀವು ಆದೇಶ ಹೊರಡಿಸಿ, ಪೀಸ್ ವರ್ಕ್ ಮುಖಾಂತರ ಕೆಲಸ ಕೊಡಬೇಕೆಂದು ಹೇಳಿದವರು ನೀವು. ಅಲ್ಲಿ ನಿಮ್ಮ ಅಧಿಕಾರಿಗಳಿಗೆ ಹೇಳಿದ್ದು, ಪೀಸ್ ವರ್ಕ್ ಕೊಟ್ಟಿರುವುದೂ ನೀವೇ.

ನಿಮ್ಮ ಅಭ್ಯರ್ಥಿಗಳಿಗೆ ಯಾವ ಕಾರ್ಯಕ್ರಮಗಳ ಬಗ್ಗೆ ಸೂಚನೆ ಕೊಟ್ಟಿದ್ದೀರಿ, ಯಾವ ಕಂಟ್ರಾಕ್ಟರ್‌ಗೆ ಕೆಲಸ ಕೊಡಬೇಕೆಂದು ಹೇಳಿದ್ದೀರೋ, ಅಂತಹವರಿಗೇ ಕೆಲಸ ಕೊಟ್ಟಿದ್ದೀರಿ. ಅಲ್ಲಿಗೆ ಸ್ವಜನ ಪಕ್ಷಪಾತ ಎಂಬುದನ್ನು ನಿಮ್ಮ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಏನು ಹೇಳಿದರು, ಸ್ವಜನ ಪಕ್ಷಪಾತ ಆಗಿದೆಯೆಂದು ನಿಮ್ಮ ಗಮನಕ್ಕೆ ಬಂದಿದೆ. ಸ್ವಜನ ಪಕ್ಷಪಾತ ಆಗಿರುವುದರ ಬಗ್ಗೆ ಏಕೆ ತನಿಖೆ ನಡೆಸಲಿಲ್ಲ? ಅವರಿಗೆ ಏಕೆ ಶಿಕ್ಷೆ ಕೊಡಲಿಲ್ಲ? ಇಲ್ಲಿಯವರೆಗೂ ಏನು ಕ್ರಮ ಕೈಗೊಂಡಿದ್ದೀರಿ? ಈ ಕೆಲಸ ನಿಲ್ಲಿಸಿದ್ದೇ ನಿಮ್ಮ ಕಾರ್ಯಕ್ರಮವಾಗಿದ್ದರೆ, ಆ ಎಂಟು ವಿಧಾನಸಭಾ ಕ್ಷೇತ್ರಗಳನ್ನು ಹೊರತುಪಡಿಸಿ, ಉಳಿದ ಕಡೆ ಮುಂಚಿತವಾಗಿ ಪ್ಯಾಕೇಜ್ ಸಿಸ್ಟಮ್‌ನಲ್ಲಿ ನಾವು ಕೆಲಸ ಮಾಡುತ್ತೇವೆಂದು ನೀವೇ ಮಾಧ್ಯಮದವರಿಗೆ ಹೇಳಿದ್ದೀರಿ. ಆದರೆ, 8 ವಿಧಾನಸಭಾ ಕ್ಷೇತ್ರಗಳಿಗೆ ಮಾತ್ರ ವಿಶೇಷ ಅನುದಾನ ಬಿಡುಗಡೆ ಮಾಡಿ ಚುನಾವಣೆಯಲ್ಲಿ ಎಲ್ಲಿ ಗೆದ್ದರೋ, ಅಲ್ಲಿಗೆ ಮಾತ್ರ ಹಣವನ್ನು ನೀವು ಮುಂದುವರೆಸಿದ್ದೀರಿ. ಚುನಾವಣೆಯಲ್ಲಿ ಸೋತ ಮೂರು ಕ್ಷೇತ್ರಗಳಲ್ಲಿ ಇವತ್ತು ನೀವು ಕೆಲಸ ಏನು ನಿಲ್ಲಿಸಿದ್ದೀರಿ, ಅದರಿಂದ ನಿಮ್ಮ ಸಣ್ಣತನ, ನಿಮ್ಮಲ್ಲಿರುವ ಭಾವನೆಗಳನ್ನು ವ್ಯಕ್ತಪಡಿಸಿಕೊಂಡಿದ್ದೀರಿ.

ಮಂಡ್ಯ ಜಿಲ್ಲೆಗೆ ಹೋಗಿ ನೀವು ಭಾಷಣ ಮಾಡುತ್ತೀರಿ. **"ಮಂಡ್ಯವನ್ನು ಮಾದರಿ ಜಿಲ್ಲೆಯನ್ನಾಗಿ ಮಾಡುವೆ - ಮುಖ್ಯಮಂತ್ರಿಗಳು"**. ರಾಜ್ಯದಲ್ಲಿಯೇ ಮಂಡ್ಯ ಜಿಲ್ಲೆಯನ್ನು ಮಾದರಿ ಜಿಲ್ಲೆಯನ್ನಾಗಿ ಪರಿವರ್ತಿಸುವೆ ಎಂದು ಘೋಷಿಸಿ ಬಂದಿದ್ದೀರಿ. ಇವತ್ತು ಕೊಟ್ಟಿದ್ದನ್ನು ಚುನಾವಣೆಯಾದ ತಕ್ಷಣವೇ ವಾಪಸ್ಸು ತೆಗೆದುಕೊಂಡಿದ್ದಾರೆ. ಇದು ನಿಮ್ಮ ಕಾರ್ಯಕ್ರಮ. ಇವತ್ತು ವರ್ಗಾವಣೆ ವಿಷಯದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಹೇಳುವುದಕ್ಕೆ ಹೋದಾಗ ಆ ಭಾಗದಲ್ಲಿ ಕುಳಿತಿರುವ ನಿಮ್ಮ ಸರ್ಕಾರದ ಕೆಲವರು 'ನೀವಿದ್ದಾಗ ಏನು ಮಾಡಿದಿರಿ? ಎಲ್ಲಾ ಗೊತ್ತಿದೆ ಎಂದು ಹೇಳಿದರು. ಅವರು ಕೂಡ "ಯಾವ ತನಿಖೆಯಾದರೂ ಮಾಡಿಕೊಳ್ಳಿ" ಎಂದರು. ನಾವು ಈ ಬಗ್ಗೆ ಚರ್ಚೆ ಮಾಡುತ್ತಿಲ್ಲ. ಈ ರಾಜ್ಯದ ಪ್ರಮುಖ ಮಾಧ್ಯಮಗಳು ಯಾವ ಪಕ್ಷವನ್ನು ಇವತ್ತು ಅಧಿಕಾರಕ್ಕೆ ತರಬೇಕೆಂದು ದೊಡ್ಡ ಮಟ್ಟದಲ್ಲಿ ನಿಮಗೆ ಸಹಕಾರ ನೀಡಿದ ಪತ್ರಿಕೆಗಳೇ ವಿಶ್ಲೇಷಣೆ ಮಾಡಿರುವುದು.

ಇವತ್ತು ಕಾನ್‌ಸ್ಟೇಬಲ್ ವರ್ಗಾವಣೆಯಿಂದ ಹಿಡಿದು, ಎಸ್.ಪಿ., ಡಿ.ಜಿ.ವರೆಗೆ ಮುಖ್ಯಮಂತ್ರಿಯವರ ಕಛೇರಿಯಿಂದಲೇ ಆದೇಶ ಹೊರಡಬೇಕೆಂದು ನಾವ್ಯಾರೂ ಹೇಳಲಿಲ್ಲ. ಇವುಗಳನ್ನು ಮಾಧ್ಯಮಗಳೇ ವಿಶ್ಲೇಷಣೆ ಮಾಡಿರುವುದು. ಉದಾಹರಣೆಗೆ , ವರ್ಗಾವಣೆ ವಿಷಯದಲ್ಲಿ ನನ್ನ ಕ್ಷೇತ್ರದಲ್ಲಿ ತಹಶೀಲ್ದಾರ್ ಒಬ್ಬ ಇದ್ದ. ನನ್ನ ಕ್ಷೇತ್ರಕ್ಕೆ ಯಾರನ್ನು ಹಾಕುತ್ತಾರೆಂಬ ಬಗ್ಗೆ ಇವತ್ತಿನವರೆಗೂ ನಾನು ಯಾರನ್ನೂ ಕೇಳುವುದಕ್ಕೆ ಹೋಗಿಲ್ಲ. ಯಾರು ಬಂದರೆ ನನಗೇನು? ಅವನ ಪಾಡಿಗೆ ಅವನು ಕೆಲಸ ಮಾಡುತ್ತಾನೆ. ಸರ್ಕಾರದವರಾದ ನೀವು ಸಂಬಳ ಕೊಡುತ್ತೀರಿ. ಇಲ್ಲಿ ಪ್ರಶ್ನೆಯೇನೆಂದರೆ, ಒಬ್ಬ ತಹಶೀಲ್ದಾರ್‌ನನ್ನು ಕೇವಲ ಒಂದೇ ತಿಂಗಳಿನಲ್ಲಿ ಆರು ಬಾರಿ, ಆರು ಜಾಗಗಳಿಗೆ ವರ್ಗಾಯಿಸಿದ್ದೀರಿ. ಹಾಗಿದ್ದರೆ, ಆತ ಯಾವ ರೀತಿ ಕೆಲಸ ಮಾಡಬೇಕು? ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ಏಳು ಬಾರಿ ವರ್ಗಾಯಿಸಿದ್ದೀರಿ. "ಎಲ್ಲಿ ಇದ್ದೀರಿ?" ಎಂದು ಕೇಳಿದರೆ ಮೊನ್ನೆ ಇದೇ ಕಾರಿಡಾರ್‌ನಲ್ಲಿ ಹೇಳುತ್ತಾರೆ. ಏಳು ತಿಂಗಳಿನಲ್ಲಿ ಏಳು ಬಾರಿ ವರ್ಗಾಯಿಸಿದ್ದೀರಿ. ಹಾಗಿದ್ದರೆ, ಅವರಿಂದ ನೀವು ಹೇಗೆ ಕೆಲಸ ತೆಗೆದುಕೊಳ್ಳುತ್ತೀರಿ? ನೀವು ಯಾವ ರೀತಿ ವರ್ಗಾವಣೆ ಮಾಡಿಕೊಂಡಿದ್ದೀರೋ, ಅದು ನನಗೆ ಬೇಕಾಗಿಲ್ಲ, ಅದರ ಬಗ್ಗೆ ಚರ್ಚೆಯೂ ಮಾಡುವುದಿಲ್ಲ.

ನಮ್ಮ ಕಾಲದಲ್ಲಿ ಸಣ್ಣ ಮಟ್ಟದಲ್ಲಿ ವರ್ಗಾವಣೆ ಆಗಿರಬಹುದು. ನಿಮ್ಮ ಕಾಲದಲ್ಲಿ ಸ್ವಲ್ಪ ದೊಡ್ಡ ಮಟ್ಟದಲ್ಲಿಯೇ ವಿಸ್ತರಿಸಿಕೊಂಡಿದ್ದೀರಿ. ಏಕೆಂದರೆ, ಈ ಪ್ರಕ್ರಿಯೆಗಳೇನಿವೆ,

ಯಾರೂ ಇದನ್ನು ಪರಿಶುದ್ಧವಾಗಿ ಮಾಡುವುದಕ್ಕಾಗುವುದಿಲ್ಲ. ಈಗಿನ ರಾಜಕೀಯ ವ್ಯವಸ್ಥೆಯಲ್ಲಿ ನಾನೇನಾದರೂ ವರ್ಗಾವಣೆಗಳನ್ನು ಪರಿಶುದ್ಧವಾಗಿ ಮಾಡಿದ್ದೇನೆ, ನಾನು ಇದರಲ್ಲಿ ಯಾವುದೇ ರೀತಿಯ ಅವ್ಯವಹಾರಗಳಿಗೆ ಅವಕಾಶ ಮಾಡಿಕೊಟ್ಟಿಲ್ಲವೆಂದು ನಾವು ವೇದಿಕೆ ಮೇಲಷ್ಟೇ ಹೇಳಬಹುದು. ಇವತ್ತಿನ ರಾಜಕೀಯ ವ್ಯವಸ್ಥೆಯಲ್ಲಿ ಸಣ್ಣ ಮಟ್ಟದಿಂದ ಹಿಡಿದು ದೊಡ್ಡ ಮಟ್ಟದವರೆಗಿನ ವರ್ಗಾವಣೆಗಳಲ್ಲಿ ನಡೆಯುವ ಪ್ರಕ್ರಿಯೆಗಳೇನಿವೆ, ಅದರ ಬಗ್ಗೆ ನಾನು ಇಲ್ಲಿ ಎಲ್ಲವನ್ನೂ ಬಿಚ್ಚಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಸತ್ಯಾಂಶಗಳೇನಿವೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ನನ್ನ ಕಾಲದ ಬಗ್ಗೆ ನೀವು ಹೇಳಿದ್ದೀರಿ. ಸದಸ್ಯರು ಮಾತನಾಡಬೇಕಾದರೆ, ಕುಮಾರಸ್ವಾಮಿಯವರ ಕಾಲದಲ್ಲಿ ಇಪ್ಪತ್ತು ತಿಂಗಳೊಳಗೆ ಸುಮಾರು 60 ಸಾವಿರವೋ, ವರ್ಗಾವಣೆಗಳಾಗಿವೆ ಎಂದರು. ಶಿಕ್ಷಣ ಇಲಾಖೆಯಲ್ಲಿ ಸುಮಾರು 18,000 ಶಿಕ್ಷಕರ ವರ್ಗಾವಣೆಯಾಗಿದೆ.

ಆ ಸಂದರ್ಭದಲ್ಲಿ, ಅದೂ ಆ ಶಿಕ್ಷಕರು ಕೊಟ್ಟಂಥ ಮನವಿಯ ಮೇರೆಗೆ ತೆಗೆದುಕೊಂಡಂಥ ನಿರ್ಧಾರ. ನಾನು ಮುಖ್ಯಮಂತ್ರಿಯಾಗಿದ್ದಾಗ DPAR ಕಛೇರಿಯಿಂದ ನಾನು ಕೆಲಸವನ್ನು ಮಾಡಬೇಕಾಗಿತ್ತು. ಆ transfer ಗಳನ್ನು ಬಿಟ್ಟರೆ, ಇವತ್ತು ನೀವು ಆಹಾರ ಇಲಾಖೆಯ ಬಗ್ಗೆ ತೆಗೆಯಬೇಕು. ಆ ಇಲಾಖೆಗೆ ನೀವೇ ಸಚಿವರಿದ್ದೀರಿ. ನಮ್ಮ ಕಾಲದಲ್ಲಿ 9000 transfers ಆಗಿದೆ. ಅದು ನಾನು ಮಾಡಿದ transfers ಅಲ್ಲ. ನಾನು ಮುಖ್ಯಮಂತ್ರಿಯಾಗಿದ್ದಾಗ ಅವರು transfers ಗಳನ್ನು ಮಾಡಿ ನಂತರ ನನ್ನ ಹತ್ತಿರಕ್ಕೆ ratificationಗೋಸ್ಕರ ತರುತ್ತಿದ್ದರು. ನಾನು ಅದಕ್ಕೆ ಸೈನ್ ಹಾಕಿಕೊಟ್ಟಿದ್ದೇನೆ. ಅವರು ಯಾವ ರೀತಿ transfer ಮಾಡಿದ್ದಾರೆಂದು ನಾನು ನೋಡುವುದಕ್ಕೆ ಹೋಗಲಿಲ್ಲ. ದಯವಿಟ್ಟು, ನನ್ನ ಕಾಲದ ಬಗ್ಗೆ ಚರ್ಚೆ ಮಾಡಬೇಡಿ. ನಾನು transfer ಗಳ ವಿಷಯದಲ್ಲಿ ಯಾವುದೇ ವ್ಯವಹಾರಕ್ಕೂ ಆಸ್ಪದ ಕೊಟ್ಟಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ :- ಅವರು ಬಾಯಿ ತಪ್ಪಿ ಹೇಳಿರಬಹುದೆಂಬುದು ನನ್ನ ಭಾವನೆ. ಆಹಾರ ಇಲಾಖೆಯೊಳಗೆ 9000 transfer ಆಗಲಿಕ್ಕೆ ಸಾಧ್ಯವಿಲ್ಲ, ಅದು ಬಹಳ ಸಣ್ಣ ಇಲಾಖೆ. ಅಲ್ಲಿ ಸಿಬ್ಬಂದಿಯೇ ಇಲ್ಲ. ಒಂದು revenue ತಾಲ್ಲೂಕಿಗೆ ಶಿರಸ್ತೇದಾರ್ ಇಬ್ಬರು Food Inspector ಮಾತ್ರ ಇರುತ್ತಾರೆ. ಒಂದು ಜಿಲ್ಲೆಗೆ ಒಬ್ಬರು Deputy Director, (Food) ಇರುತ್ತಾರೆ. ಒಬ್ಬರು Assistant Director,

(Food) ಇರುತ್ತಾರೆ. ಇಷ್ಟು ಬಿಟ್ಟರೆ ಅಲ್ಲಿ ಸಿಬ್ಬಂದಿ ಇಲ್ಲ. ತಾವು ತಪ್ಪು ಹೇಳಿರಬಹುದೆಂಬುದು ನನ್ನ ಭಾವನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನಾನು ಈ ವಿಷಯಗಳನ್ನು ಮಾಧ್ಯಮಗಳಲ್ಲಿ ಏನು ಬಂದಿದೆ ಅದರ ಆಧಾರದ ಮೇಲೆ ಹೇಳುತ್ತಿದ್ದೇನೆ. ನಾನು ಯಾವ ಇಲಾಖೆಗೆ ಸಂಬಂಧಪಟ್ಟ ಹಾಗೆಯೂ ಮತ್ತೆ ಏನೇನು transfer ಗಳಾಗಿದೆ ಎಂದು ಅದನ್ನು ಹುಡುಕುವುದಕ್ಕೆ ಹೋಗಿಲ್ಲ. ಉದಾಹರಣೆಗೆ ಪೋಲೀಸ್ ಇಲಾಖೆಯ ಬಗ್ಗೆ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದರು. Circle Inspector, Sub Inspector, Additional S.P. ಇವರ transfer ಗಳು ನನ್ನ ಕಾಲದಲ್ಲಿ ಆಗಿಲ್ಲ. ಆಯಾ ಇಲಾಖಾ ಮಂತ್ರಿಗಳಿಗೆ ಅವರೇ transfer ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೆ. ಆದರೆ, ಇವತ್ತೇನಾಗಿದೆ ಎಂದು ಮಾಧ್ಯಮಗಳು ಬರೆಯುತ್ತಿವೆ. ಇದನ್ನು ನಾವು ಹೇಳುವುದಲ್ಲ. ನಿನ್ನೆ ಕೃಷ್ಣಪ್ಪನವರು ಹೇಳಿದ ತಕ್ಷಣ ನೀವು ಅವರ ಮೇಲೆಯೇ ಮುಗಿಬಿದ್ದಿರಿ. ಸಾಕ್ಷಿ ಇದ್ದರೆ ಇಡಿ ಎಂದು ಹೇಳಿದಿರಿ. ಆದರೆ, ಹೊರಗಡೆ..

ಅಧ್ಯಕ್ಷರು :- ಕುಮಾರಸ್ವಾಮಿಯವರೆ, ವಿರೋಧ ಪಕ್ಷದ ನಾಯಕರಾದ ಮಾನ್ಯ ಖರ್ಗೆಯವರೂ ಮಾತನಾಡಿದರು. ಅವರು ಯಾವ ರೀತಿಯಲ್ಲಿ ಮಾತನಾಡಿದರು, ಈಗ ತಾವು ಯಾವ ರೀತಿಯಲ್ಲಿ ಮಾತನಾಡುತ್ತಿದ್ದೀರಿ? (ಗೊಂದಲ) General ಆಗಿ. . . .

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ನಾನು ಏನು ಹೇಳುತ್ತಿದ್ದೇನೆಂದರೆ, general ಆಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು :- Specific ಆಗಿ ಆ ರೀತಿ ಹೇಳಿದ್ದರಿಂದ ನಾನು ಹೇಳಿದ ಅಷ್ಟೇ. ಈಗ ವಿರೋಧ ಪಕ್ಷದ ನಾಯಕರು ಮಾತನಾಡಿದರು. ಅವರು ಯಾವ ರೀತಿ ಮಾತನಾಡಿದರು ಅದನ್ನು ಆಲಿಸಿ ಆ ರೀತಿ. . . .

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಅಧ್ಯಕ್ಷರೆ, ನಾನು ಯಾವುದೂ ಆಪಾದನೆಯನ್ನು ಯಾರ ಮೇಲೆಯೂ ಮಾಡುತ್ತಿಲ್ಲ. ಯಾರೋ ಒಬ್ಬರು ಅಧಿಕಾರಿಯನ್ನು 6 ಕಡೆಗೆ ಒಂದು ತಿಂಗಳಲ್ಲಿ ವರ್ಗಾವಣೆ ಮಾಡಿರುವುದು ಹೇಳಿದ್ದೇನೆ. ಅದು ನಡೆದಿರುವುಧು ಇದೆ. ನಾನು ಅದರ ಬಗ್ಗೆ ಹೇಳಿದ್ದೇನೆ. ಅದನ್ನು ನಾನು

ಹೇಳುವುದಲ್ಲ. ಮಾಧ್ಯಮಗಳು ಬರೆಯುತ್ತಿವೆ. ಏಕೆಂದರೆ, ಅದನ್ನು ನಾನು raise ಮಾಡಿದ್ದಲ್ಲ. ಅವರೇ ಚರ್ಚೆ ಮಾಡಿದರು. ನಾವಲ್ಲ ಚರ್ಚೆ ಮಾಡಿದ್ದು. ಇವತ್ತು ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣೆ ಮೇಲೆ ಚರ್ಚೆ ಮಾಡುವಾಗ ಅವರು ಆ ವಿಷಯುನ್ನು raise ಮಾಡಿದ್ದಾರೆ. ಇವತ್ತು ಒಂದು ಪತ್ರಿಕೆಯಲ್ಲಿ ಸಂಪಾದಕೀಯದಲ್ಲಿ, ಇದು ವರ್ಗಾವಣೆ ಆಡಳಿತ, ದಂಧೆಗೆ ಕಡಿವಾಣ ಹಾಕಬೇಕಾಗಿದೆ ಎಂದು ಬರೆಯುತ್ತಾರೆ. ಇದನ್ನು ನಾವು ವಿರೋಧ ಪಕ್ಷದವರು ಹೇಳುತ್ತಿಲ್ಲ. ಇದನ್ನು ನಾನು ಓದಲಿಕ್ಕೆ ಹೋಗದೆ ಇಲ್ಲಿಗೇ ಬಿಡುತ್ತೇನೆ. ವರ್ಗಾವಣೆ ವಿಷಯದಲ್ಲಿ ನಮ್ಮ ಮೇಲೆ ಯಾವುದೇ ರೀತಿ ಗೂಬೆ ಕೂರಿಸುವ ಕೆಲಸ ಬೇಡ. ಅದರ ಬಗ್ಗೆ ಜನಸಾಮಾನ್ಯರು ಚರ್ಚೆ ಮಾಡುತ್ತಾರೆ. ಕೊಪ್ಪಳ ಜಿಲ್ಲೆಯೊಳಗೆ steel plant ಗಳಿಗೆ ಹೆಚ್ಚಿನ ಕಾರ್ಖಾನೆಗಳಿಗೆ ಅನುಮತಿ ಕೊಟ್ಟಿದ್ದೇವೆ, ಕೊಪ್ಪಳ ಜಿಲ್ಲೆ steel park ಎಂದು ಹೊಸದಾಗಿ ತೆರೆಯಬೇಕೆಂಬುದು ನಮ್ಮ ಶಾಸಕರ ಒತ್ತಾಯವಿದೆ. ಸಾಧ್ಯವಾದರೆ, ಮುಖ್ಯಮಂತ್ರಿಗಳು ಅದನ್ನು ಮಾಡಬಹುದು. ವಿರೋಧ ಪಕ್ಷದ ನಾಯಕರು ಚರ್ಚ್ ಬಗ್ಗೆ detail ಆಗಿ ಮಾತನಾಡಿದ್ದಾರೆ. ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ. ಇವತ್ತು ನೀವು ಭಯೋತ್ಪಾದನೆಯನ್ನು ನಿಲ್ಲಿಸಬೇಕೆಂದು ಹೇಳುತ್ತೀರಿ. ಒಂದು ಪತ್ರಿಕೆಯಲ್ಲಿ ಒಂದು ಫೋಟೋ ಬಂದಿರುವುದನ್ನು ನಾನು ಅಧ್ಯಕ್ಷರೆ ನಿಮಗೆ ಕಳುಹಿಸುತ್ತೇನೆ. ಚರ್ಚ್ ಮೇಲಿನ ದಾಳಿ ಘಟನೆಯ ಬಗ್ಗೆ ಎಲ್ಲೆಲ್ಲಿ ದಾಳಿ ನಡೆದಿದೆ ಹೆಚ್ಚು ಕಡಿಮೆ ಅಲ್ಲಿಗೆ ನಾನು ಭೇಟಿ ಕೊಟ್ಟಿದ್ದೇನೆ. ಚಿಕ್ಕಮಗಳೂರು ದಂಟರಮಕ್ಕಿಯಲ್ಲಿರುವ ಕ್ರೈಸ್ತ ವಿಶ್ವಾಸಿಗಳ ಪ್ರಾರ್ಥನಾ ಮಂದಿರಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಬಜರಂಗ ದಳದ ಕಾರ್ಯಕರ್ತರು ಎಂದು ವಿಷಯ ಬಂದಿದೆ. ಪೊಲೀಸ್ ಇಲಾಖೆಯುವರು, ಆ ಬಜರಂಗ ದಳದ ಕಾರ್ಯಕರ್ತರು ಎಷ್ಟು ಕೇಕೆ ಹಾಕಿಕೊಂಡು ನಕ್ಕು ಮಾತನಾಡುತ್ತಿದ್ದಾರೆಂಬುದು ಈ ಫೋಟೋ ನೋಡಿದರೆ ಗೊತ್ತಾಗುತ್ತದೆ. ಅಲ್ಲಿಗೆ ಜನಸಾಮಾನ್ಯರು, ಎಲ್ಲಾ ಸಮಾಜಗಳು ತಮಗೆ ಯಾವ ರೀತಿ ರಕ್ಷಣೆ ಸಿಗುತ್ತದೆ ಎನ್ನುವ ಬಗ್ಗೆ ವಿಶ್ವಾಸಕ್ಕೆ ತೆಗೆದುಕೊಳ್ಳಬಹುದು ಅನ್ನುವುದನ್ನು ದಯವಿಟ್ಟು ತಾವೇ ಈ ಫೋಟೋ ನೋಡಿ ಒಂದು ನಿರ್ಧಾರಕ್ಕೆ ಬರುವುದು ಸೂಕ್ತ ಅಧ್ಯಕ್ಷರೆ. ಆ ಪೋಲೀಸ್ ಅಧಿಕಾರಿಗಳು ಬಜರಂಗ ದಳದ ಕಾರ್ಯಕರ್ತರ ಜೊತೆ shake hand ಕೊಟ್ಟುಕೊಂಡು, ನಕ್ಕುಕೊಂಡು ಚರ್ಚೆ ಮಾಡಿಕೊಂಡು ಸಾರ್ವಜನಿಕವಾಗಿ ನಿಂತಿದ್ದಾರೆ. ಪೋಲೀಸ್ ಇಲಾಖೆಯುವರು ಆ ಚರ್ಚ್ ಮೇಲೆ ದಾಳಿ ನಡೆದಾಗ ಯಾವ ರೀತಿ

ನಡೆದುಕೊಂಡಿದ್ದಾರೆನ್ನುವುದಕ್ಕೆ ಇದಕ್ಕಿಂತಲೂ ಉತ್ತಮವಾದ ಸಾಕ್ಷಿ ಮತ್ತೊಂದಿಲ್ಲ ಎನ್ನುವ ಮಾತನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ಚರ್ಚ್ ಮೇಲಿನ ದಾಳಿ ಬಗ್ಗೆ ನಾನು ಹೆಚ್ಚಿನ ವಿಷಯವನ್ನು ಮತ್ತೆ ಪ್ರಸ್ತಾಪ ಮಾಡುವುದಿಲ್ಲ. ಅದರ ದಾಳಿಯ ಹಿನ್ನೆಲೆ ಮುಖ್ಯಮಂತ್ರಿಯವರಿಗೂ ಬಿಸಿ ತಟ್ಟಿತು ಎನ್ನುವುದಕ್ಕೆ, ಮುಖ್ಯಮಂತ್ರಿಯವರು ಒಂದು ಸಭೆಗೆಂದು ಡೆಲ್ಲಿಗೆ ಹೋಗುತ್ತಾರೆ. ವಿಶ್ವ ಆರ್ಥಿಕ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಯಡಿಯೂರಪ್ಪನವರಿಗೆ ಸಭಿಕರೊಬ್ಬರು ಚರ್ಚ್ ದಾಳಿಯ ಬಗ್ಗೆ ಪ್ರಶ್ನೆಯೊಂದನ್ನು ಎಸೆಯುವ ಮೂಲಕ ಮುಖ್ಯಮಂತ್ರಿಯವರನ್ನು ಕ್ಷಣಕಾಲ ತಬ್ಬಿಬ್ಬುಗೊಳಿಸಿದರು. ಈ ಚರ್ಚ್ ದಾಳಿಗೆ ಸಂಬಂಧಪಟ್ಟಹಾಗೆ ಮೆಸೇಜ್ ಹೋಗಿದೆ ಎನ್ನುವುದನ್ನು ಮಾತ್ರ ಸಭೆಯ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಏಕೆಂದರೆ, ಈ ರೀತಿಯ ಭಯೋತ್ಪಾದನೆಯ ಚಟುವಟಿಕೆಯನ್ನು ನಿಲ್ಲಿಸುವುದಕ್ಕೆ ವಿದ್ಯಾರ್ಥಿಗಳನ್ನು ನಾವು ಉಪಯೋಗ ಮಾಡುತ್ತೇವೆ ಎಂದು ವಿವೇಕಾನಂದರ ಮತ್ತು ಸುಭಾಷ್ ಚಂದ್ರ ಬೋಸ್‌ರವರ ಹೆಸರನ್ನು ಹೇಳಿಕೊಂಡು ಈ ರೀತಿ ನೀವು ಸರ್ಕಾರದ ವೆಚ್ಚದಲ್ಲಿ ಕಾರ್ಯಕ್ರಮ ಮಾಡುವುದರ ಮುಖಾಂತರ ಭಯೋತ್ಪಾದನೆಯನ್ನು ನಿಲ್ಲಿಸುತ್ತೇವೆಂದು ಹೇಳುವವರು, ಎಲ್ಲಾ ಸಮಾಜಗಳನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೇ ಇದ್ದರೆ ನೀವು ಯಾವುದೇ ಕಾರಣಕ್ಕೂ ಭಯೋತ್ಪಾದನೆಯನ್ನು ಅಳಿಸಲಿಕ್ಕೆ ಸಾಧ್ಯವಿಲ್ಲ. ಅದನ್ನು ಉಳಿಸಿಕೊಂಡು ಹೋಗಬೇಕಾದ ಪರಿಸ್ಥಿತಿ ನಿಮ್ಮ ನಡವಳಿಕೆಗಳಲ್ಲಿಯೇ ಮಾಡುತ್ತೀರಿ ಎನ್ನುವುದನ್ನು ನಾನು ಹೇಳಲಿಕ್ಕೆಬಯಸುತ್ತೇನೆ. ಬಳ್ಳಾರಿ ಜಿಲ್ಲೆಯಲ್ಲಿ Airport ಮಾಡಬೇಕೆಂದಿದ್ದಾರೆ. ಶಿರವಾರ ರೈತರು ದೊಡ್ಡ ಮಟ್ಟದ ಹೋರಾಟ ಮಾಡಿದ್ದಾರೆ. ಅವರ ಮೇಲೆ ಒತ್ತಡ ಹಾಕಿ ದಬ್ಬಾಳಿಕೆ ಮಾಡಿ ಒಳ್ಳೆಯ ಕೃಷಿ ಭೂಮಿಯಲ್ಲಿ ಇವತ್ತೇನು Airport ಮಾಡಬೇಕೆಂದಿದ್ದೀರಿ, ಬೇರೆ ಕಡೆ Airport ಮಾಡುವುದಕ್ಕೆ ನನ್ನ ತಕರಾರು ಇಲ್ಲ. ಆ ಒಳ್ಳೆಯ ಕೃಷಿ ಭೂಮಿಯನ್ನು ಇವತ್ತು ಆಧಾರವಾಗಿಟ್ಟುಕೊಂಡು ಜೀವನ ಮಾಡುವ ರೈತರನ್ನು ಒಕ್ಕಲೆಬ್ಬಿಸುವ ಕೆಲಸಕ್ಕೆ ಕೈ ಹಾಕುವುದು ಬೇಡ ಎನ್ನುವುದು ಈ ಸಂದರ್ಭದಲ್ಲಿ ನನ್ನ ಮನವಿ ಎನ್ನುವುದನ್ನು ಹೇಳಲಿಕ್ಕೆ ಬಯಸುತ್ತೇನೆ. ಕೊನೆಯದಾಗಿ, ಅಭಿವೃದ್ಧಿ ಎನ್ನುವ ಬಗ್ಗೆ ನಮ್ಮ ಮುಖ್ಯಮಂತ್ರಿಯವರು ಏನು ಹೇಳುತ್ತಾರೆ ನಾವು ಅದಕ್ಕೆ ಸಂಪೂರ್ಣವಾಗಿ ಸಹಕಾರ ಕೊಡಲು ಸಿದ್ಧರಿದ್ದೇವೆ. ಅವರು ಯಾವುದೇ ಕಾರಣಕ್ಕೂ ಪದೇ ಪದೇ ವಿರೋಧ ಪಕ್ಷಗಳು ನಮಗೆ ಸಹಕಾರ ಕೊಡಲು ಸಿದ್ಧವಿಲ್ಲ, ವಿರೋಧ ಪಕ್ಷಗಳವರು ಹಾಗೆ ಮಾತನಾಡುತ್ತಾರೆ, ಹೀಗೆ ಮಾತನಾಡುತ್ತಾರೆ ಎಂದು ವಿರೋಧ ಪಕ್ಷಗಳವರಿಗೆ certificate ಕೊಡುತ್ತಾರೆ. ಆದರೆ, ನಾನು

ನಿಮಗೆ ಮನವಿ ಮಾಡುತ್ತೇನೆ, ಈಗ ನೀವೇ ಹೇಳುತ್ತೀರಿ, ಕಳೆದ ಜೂನ್ ತಿಂಗಳಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತೀರಿ. ಬೆಳಗಾವಿಯ ಸಮಗ್ರ ಅಭಿವೃದ್ಧಿಗೆ ಎರಡೂವರೆ ಸಾವಿರ ಕೋಟಿ ರೂಪಾಯಿಗಳ ಕ್ರಿಯಾ ಯೋಜನೆ, ಅಲ್ಲಿಂದ ಮುಂದೆ ಹುಬ್ಬಳ್ಳಿ ಧಾರವಾಡಕ್ಕೆ ಮೂರು ಸಾವಿರ ಕೋಟಿ ರೂಪಾಯಿಗಳ ಕ್ರಿಯಾ ಯೋಜನೆ ಎಂದು ಇದೆಲ್ಲವನ್ನೂ ನೀವೇ ಸಾರ್ವಜನಿಕವಾಗಿ ಘೋಷಣೆ ಮಾಡಿಕೊಂಡು ಬರುತ್ತಿದ್ದೀರಿ. ಇದನ್ನು ನಾವೇನೂ ಹೇಳುತ್ತಿಲ್ಲ. ಆದರೆ, ಜನರಿಗೆ ತಾತ್ಕಾಲಿಕವಾಗಿ ಖುಷಿ ಕೊಡುವ ಕೆಲಸಕ್ಕೆ ಹೋಗಬೇಡಿ. ಕೇವಲ ಮಾಧ್ಯಮಗಳಲ್ಲಿಯೋ, ಅಥವಾ ನಿಮ್ಮ ಸಾಧನೆ ಪುಸ್ತಕಗಳಲ್ಲಿ ಆ ವಿವರಗಳನ್ನು ಕೊಡುವುದರ ಮೂಲಕವಾಗಿ ಅಷ್ಟಕ್ಕೇ ತೃಪ್ತಿ ಮಾಡಬೇಡಿ. ದಯವಿಟ್ಟು ಕೆಲಸಗಳನ್ನು implement ಮಾಡುವುದಕ್ಕೆ ಗಮನ ಕೊಡಬೇಕೆಂದು ಮನವಿ ಮಾಡುತ್ತೇನೆ. ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಅವರೇ ಘೋಷಣೆ ಮಾಡಿದರು. ಸುವರ್ಣ ಸೌಧ ಕಟ್ಟಡ ಕಟ್ಟುವ ವಿಷಯದಲ್ಲಿ ಕಳೆದ ವರ್ಷ ಹಣ ಇಟ್ಟಿದ್ದೇವೆಂದು ಹೇಳಿದರು. ಜಾಗವೂ ನಿಗದಿಯಾಯಿತು. ಅಷ್ಟರಲ್ಲಿ ಚುನಾವಣೆಯಾಯಿತು. ಚುನಾವಣೆ ಬಂದ ನಂತರ ಆ ಕೆಲಸ ಅಲ್ಲಿಗೇ ನಿಂತಿತು. ಆನಂತರ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂತು. ಮುಖ್ಯಮಂತ್ರಿಯವರು ಹೊಸದಾಗಿ ಸರ್ಕಾರ ರಚಿಸಿದರು. ಆಗ ಬೇರೆ ಜಾಗಕ್ಕೆ ಸ್ಥಳಾಂತರ ಮಾಡಬೇಕೆಂದು ತೀರ್ಮಾನ ಮಾಡಿದರು. ಅದಕ್ಕೂ ನಾನು ಚಕಾರವೆತ್ತಲಿಲ್ಲ. ಆಗೇನೋ ಸಣ್ಣಪುಟ್ಟ ವಿರೋಧ ಮಾಡಿದರು ಎಂದು ಬಂತು. ಅದು ಅಲ್ಲಿಗೇ ನಿಂತುಹೋಯಿತು. ಅದಕ್ಕೆ ನಾನು ಎಲ್ಲಿಯೂ ಚಕಾರವೆತ್ತಲಿಲ್ಲ. ಮೊನ್ನೆ ನೀವು ಆ ಜಾಗದಲ್ಲಿ ಗುದ್ದಲಿ ಪೂಜೆ, ಭೂಮಿ ಪೂಜೆ ಮಾಡಿಕೊಂಡಿರಿ. ಆ ಬಗ್ಗೆ ನಾನು ಚಕಾರವೆತ್ತಲಿಲ್ಲ, ಎಲ್ಲಿಯೂ ಮಾತನಾಡಲಿಲ್ಲ. ಬೆಳಗಾವಿಯ ಜಿಲ್ಲೆಯ ಅಭಿವೃದ್ಧಿ ಆಗಬೇಕೆಂಬ ಭಾವನೆ ನನ್ನದಾಗಿದೆ. ಬೆಳಗಾವಿಯಲ್ಲಿ ವಿಧಾನಸೌಧದ ಕಟ್ಟಡವಾಗಬೇಕು. ಆ ದೃಷ್ಟಿಯಿಂದ ಇಲ್ಲಿಯವರೆಗೆ ಈ ಕಟ್ಟಡದ ವಿಷಯದಲ್ಲಿ ನಾನು ಎಲ್ಲಿಯೂ ಚಕಾರವೆತ್ತಲಿಲ್ಲ. ಸಧ್ಯ, ಹೇಗೋ ಒಂದು ರೀತಿಯಲ್ಲಿ ಕೆಲಸ ಪ್ರಾರಂಭ ಆಗಲಿ ಎನ್ನತಕ್ಕ ಒಂದು ನಿರ್ಧಾರ ಮಾಡಿ ನಾನು ಮೌನವಾಗಿದ್ದೆ. ಆದರೆ, ಒಂದು ಮಾತು ಹೇಳುತ್ತೇನೆ, ಕೆಲವು ಸಂಘಟನೆಗಳು ಕುಮಾರಸ್ವಾಮಿಯವರನ್ನು ಕರೆಯಲಿಲ್ಲವೆಂದು ಹೇಳಿ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆಂದು ಎಂದು ವರದಿ ಮಾಡಿದ್ದಾರೆ. ನಾನು ಈ ಸಭೆಯ ಮೂಲಕ ಒಂದು ಮಾತು ಹೇಳುತ್ತೇನೆ, ನಾನು ಮೊದಲು ಮುಖ್ಯಮಂತ್ರಿಯಾಗಿದ್ದಾಗಲೂ ಹೇಳಿದ್ದೇನೆ, ಇವತ್ತು ಯಾವುದೋ ಕಲ್ಲಿನಲ್ಲಿ ಹೆಸರು ಹಾಕಿಸಿಕೊಳ್ಳಲು, invitation ನಲ್ಲಿ ಹೆಸರು ಹಾಕಿಸಿಕೊಳ್ಳಲು ರಾಜಕೀಯ ಮಾಡಲಿಕ್ಕೆ ನಾನು

ಹೋಗುವುದಿಲ್ಲ. ನಾನು ರಾಜಕೀಯ ಮಾಡಲಿಕ್ಕೆ ಹೊರಟಿರುವುದು, ನಾನು ಹೋರಾಟ ಮಾಡುತ್ತಿರುವಂಥದ್ದು, ಈ ಉತ್ತರ ಕರ್ನಾಟಕದ ಜನರ ಹೃದಯದಲ್ಲಿ ನನ್ನ ಹೆಸರನ್ನು ಸ್ಥಾಪನೆ ಮಾಡಿಕೊಳ್ಳಬೇಕೆಂದು ನಾನು ಹೋರಾಟ ಮಾಡುತ್ತಿದ್ದೇನೆ. ಆದ್ದರಿಂದ, ಈ ವಿಷಯದಲ್ಲಿ ಈ ಸಭೆಯಲ್ಲಿ, ವೇಲ್ಮನೆಯಲ್ಲಿ, ಕುಮಾರಸ್ವಾಮಿಯವರನ್ನು ಕರೆಯಲಿಲ್ಲವೆಂದು ಏನು ಚರ್ಚೆ ಮಾಡಿಕೊಂಡಿದ್ದಾರೆ ಅದರ ಬಗ್ಗೆ ನನಗೆ ಯಾವುದೇ ಬೇಸರವಿಲ್ಲ. ಆ ಕಟ್ಟಡದಲ್ಲಿ ಮುಂದಿನ ವರ್ಷ ವಿಧಾನ ಸಭೆಯ ಕಲಾಪಗಳನ್ನು ನಡೆಸುತ್ತೇವೆಂದು ಮುಖ್ಯಮಂತ್ರಿಗಳು ಮೊನ್ನೆ ಘೋಷಣೆ ಏನು ಮಾಡಿದ್ದಾರೆ, ಮುಂದಿನ ವರ್ಷ ಆ ಕಟ್ಟಡವನ್ನು ಸಂಪೂರ್ಣ ಗೊಳಿಸಿ, ಅಲ್ಲಿ ಕಾರ್ಯಕ್ರಮ ಮಾಡುವುದಕ್ಕೆ ಚಾಲನೆ ಕೊಟ್ಟು, ಮುಂದಿನ ವರ್ಷ ಆ ಹೊಸ ಕಟ್ಟಡದಲ್ಲಿ ವಿಧಾನ ಸಭಾ ಅಧಿವೇಶನ ನಡೆದರೆ ನಾನು ಮುಖ್ಯಮಂತ್ರಿಗಳನ್ನು ಇವತ್ತೂ ನಾನು ಅಭಿನಂದಿಸುತ್ತೇನೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :- ಈಗ ಒಂದು ಪ್ರಕಟಣೆ ಇದೆ.

4. ಪ್ರಕಟಣೆ

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2009ನೇ ಸಾಲಿನ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ ವಿಧೇಯಕವನ್ನು ಇಂದು ದಿನಾಂಕ 24ನೇ ಜನವರಿ 2009ರಂದು ಯಾವುದೇ ತಿದ್ದುಪಡಿಗಳಿಲ್ಲದೇ ಅಂಗೀಕರಿಸಿದೆ ಎಂದು ತಿಳಿಸಿರುತ್ತಾರೆ.

ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು.

[ಗೊಂದಲ]

ಈಗಾಗಲೇ ಟೈಮ್ ಆಗಿದೆ. ಇವತ್ತು ನಾವು 1 ಗಂಟೆಗೆ ಸದನ close ಮಾಡಬೇಕಾಗಿತ್ತು. ಸಮಯದ ಅಭಾವದಿಂದ ತೊಂದರೆಯಾಗಿದೆ. ಇನ್ನು ಚರ್ಚೆ ಬೇಡ.

[ಗೊಂದಲ]

ಡಾ॥ ಬಿ.ಎಸ್. ಯಡಿಯೂರಪ್ಪ :- ಆಮೇಲೆ ಬೇಕಾದರೆ ಮಾನ್ಯ ಸದಸ್ಯರುಗಳು clarification ಕೇಳಲಿ.

[ಗೊಂದಲ]

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಒಂದಿಬ್ಬರಿಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು :- ಆಗುವುದಿಲ್ಲ. ಏಕೆಂದರೆ, ಇದು 1 ಅಥವಾ 1.30 ಗಂಟೆಗೆ ಸದನ close ಮಾಡಬೇಕಾಗಿತ್ತು. ಸಮಯದ ಅಭಾವದಿಂದ ಮಾತನಾಡಲು ಅವಕಾಶ ಕೊಡಲಿಕ್ಕೆ ಆಗಿಲ್ಲ. ದಯಮಾಡಿ ಸಹಕರಿಸಿ.

[ಗೊಂದಲ]

ಮಾನ್ಯ ಸದಸ್ಯರು ದಯವಿಟ್ಟು ಸಹಕಾರ ಕೊಡಿ. ಮಾನ್ಯ ಮುಖ್ಯಮಂತ್ರಿಗಳ ಉತ್ತರದ ನಂತರ ನಿಮಗೆ clarification ಕೇಳಲು ನಾನು ಅವಕಾಶ ಮಾಡಿಕೊಡುತ್ತೇನೆ.

[ಗೊಂದಲ]

ಶ್ರೀ ಅಶೋಕ್ ಪಟ್ಟಣ :- ನಮಗೆ ಮಾತನಾಡಲು ಅವಕಾಶ ಕೊಡದಿದ್ದರೆ, ಬೆಳಗಾಂನಲ್ಲಿ ಅಧಿವೇಶನ ನಡೆಸಿ ಏನು ಪ್ರಯೋಜನವಾಯಿತು?

[ಗೊಂದಲ]

ಅಧ್ಯಕ್ಷರು :- ದಯಮಾಡಿ ಸಹಕಾರ ನೀಡಿ. Please ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಅಶೋಕ್ ಪಟ್ಟಣ :- ಈ ಭಾಗದ ಜನಕ್ಕಾದರೂ ಮಾತನಾಡಲು ಅವಕಾಶ ಕೊಡಲೇಬೇಕು.

[ಗೊಂದಲ]

ಅಧ್ಯಕ್ಷರು :- ನಿನ್ನೆ 20ಕ್ಕೂ ಹೆಚ್ಚು calling attentions ಚರ್ಚೆ ಮಾಡಿದ್ದೇವೆ. ಆಗ ಎಲ್ಲರಿಗೂ ಅವಕಾಶ ಕೊಡಲಾಗಿದೆ. ಬೇರೆ ಬೇರೆ ಸಂದರ್ಭ ಗಳಲ್ಲಿ ತಮಗೆ ಮಾತನಾಡಲು ನಾನು ಅವಕಾಶ ಕೊಟ್ಟಿದ್ದೇನೆ. ಆದರೆ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ದಯಮಾಡಿ ಸಹಕಾರ ಕೊಡಿ. ಎಲ್ಲರೂ ಕುಳಿತುಕೊಳ್ಳಿ.